
ಅಪರಂಜಿ



ನಗೆಯ ಕಾರಂಜಿ

ಜನ್ಮದಿನೋತ್ಸವ ಸಂಚಿಕೆ

- ಆನಂದ್
- ಶಿವು
- ಕೇಫ
- ಜಿ. ಎಸ್. ಜಿ.
- ಚನ್ನಗಿರಿ ಸುಧೀಂದ್ರ
- ಸ್ವಲ್ಪಬುದ್ಧಿ
- ವಿ. ಜಿ. ಭಟ್ಟ
- ಕಿಟ್ಟು
- ಅಪ್ರಸ್ತುತ
- ಅಶ್ವಥ್

ಸಂಪುಟ–೩
ಸಂಚಿಕೆ–೧
ಅಕ್ಟೋಬರ್–85

ಬಿಡಿಪ್ರತಿ :
ಕೇವಲ ಒಂದು ರೂಪಾಯಿ


ಮಾಸ್‌ಕಾಟ್ ಆಗ್ರೋ ಕೆಮಿಕಲ್ಸ್
ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,
ಪೀಣ್ಯ ಇಂಡಸ್ಟ್ರಿಯಲ್ ಏರಿಯ,
ಬೆಂಗಳೂರು–560 058

ದೂರವಾಣಿ 38902 ತಂತಿ 'ಮಾಸ್‌ಕಾಟ್' ಟೆಲೆಕ್ಸ್ 845–580

ಭತ್ತ, ಕಬ್ಬು ಮತ್ತು ಗೋದಿಯ ಬೆಳೆಗಳಲ್ಲಿ ಕಳೆ ನಿಯಂತ್ರಣ ಮಾಡುವುದಕ್ಕೆ
"ನಾಕ್ವೀಡ್" ಕಳೆ ನಾಶಕವನ್ನು ಉಪಯೋಗಿಸಿರಿ.

ಶುಭಾಶಯಗಳೊಂದಿಗೆ :—



ಎನ್ ಎಸ್ ಗಿರಿಮಾಜಿ ಅಂಡ್ ಸನ್ಸ್
[ಬೆಂಗಳೂರು]

ಸಂ. 46, ಇಂಡಸ್ಟ್ರಿಯಲ್ ಸಬರ್ಬ್,
ಯಶವಂತಪುರ, ಬೆಂಗಳೂರು–560 022

ಅಪರಂಜಿ

ಜನ್ಮದಿನೋತ್ಸವ ಸಂಚಿಕೆ

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ ರೂ. 15-00

ಎರಡು ಮಾತು

ಹಿಂದಿನ ಸಂಚಿಕೆಯಲ್ಲಿ ನಮ್ಮ ವಿನಂತಿಗೆ ಉತ್ತರವಾಗಿ ಅನೇಕ ಓದುಗ ಮಿತ್ರರು ನಮಗೆ ಪತ್ರ ಬರೆದಿದ್ದಾರೆ. ಹಲವರು ಬೆಲೆ ಇಷ್ಟೇ ಇರಲಿ ಎಂದು ಹೇಳಿದ್ದರೂ, ಬಹುತೇಕ ಜನ, ಅನಿವಾರ್ಯವಾದರೆ ಬೆಲೆ ಹೆಚ್ಚಿಸಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಎಲ್ಲರ ಅನಿಸಿಕೆಗಳನ್ನು ಗಣನೆಗೆ ತೆಗೆದುಕೊಂಡು, ನವಂಬರ್-85ನೇ ಸಂಚಿಕೆಯಿಂದ ಬಿಡಿ ಪ್ರತಿಯ ಬೆಲೆ ಒಂದೂವರೆ ರೂಪಾಯಿ ಎಂದು ನಿರ್ಧರಿಸಿದ್ದೇವೆ. ವಾರ್ಷಿಕ ಚಂದಾವನ್ನು ಹದಿನೈದು ರೂಪಾಯಿಗಳಿಗೇ ನಿಗದಿಸಿದ್ದು, ಚಂದಾದಾರರಿಗೆ ಒಂದು ಇನ್ಸೆಂಟಿವ್ ಇರುವಂತೆ ಮಾಡಿದ್ದೇವೆ. ಇದೇ ಅಲ್ಲದೇ ಇಂದಿನಿಂದ ಅಪರಂಜಿಗೆ ನೂರೈವತ್ತು ರೂಪಾಯಿ ನೀಡಿ ಅಜೀವ ಚಂದಾದಾರರಾಗಬಹುದು.

ಅಪರಂಜಿಗೆ ಎರಡು ತುಂಬಿ ಮೂರರಕ್ಕೆ ಕಾಲಿಡುತ್ತಿದ್ದಾಳೆ. ಕೊಂಡು ಓದುವ ಕನ್ನಡಿಗರ ಇಲ್ಲಿನ ತನಕದ ಉತ್ಸಾಹವನ್ನು ನೋಡಿದರೆ, ಅಪರಂಜಿಯ ಮುಂದಿನ ಹಾದಿಯಲ್ಲಿ ಕಾಡಿನ ನೆರಳು ಬೀಳುವುದೇನೋ ಎನ್ನಿಸುತ್ತದೆ. ಏನೇ ಇದ್ದರೂ ಹುಟ್ಟಿದ ಹಬ್ಬದಂದು ಹೊಸ ಉತ್ಸಾಹದಿಂದ, ಸಂಭ್ರಮದಿಂದ ಮುನ್ನಡಿ ಇಡುತ್ತಿದ್ದಾಳೆ ಅಪರಂಜಿ. ಬರಹಗಾರರ, ಓದುಗರ ಒತ್ತಾಸೆ ಎಂದಿನಂತಿರಲಿ, ಅಲ್ಲ, ಎಂದಿಗಿಂತ ಹೆಚ್ಚಾಗಿರಲಿ ಎಂಬುದೇ ಅವಳ ಆಸೆ,

—ಸಂಪಾದಕ

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ,
ಬೆಂಗಳೂರು-560 003.

ಈ ಸಂಚಿಕೆಯಲ್ಲಿ........ ...

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ,
ದೂರವಾಣಿ : 36 29 89
36 34 44



ಸಂಪುಟ—೨ ಅಕ್ಟೋಬರ್ ೧೯೮೫ ಸಂಚಿಕೆ—೧

ಯಾವ ನಮಗೆ ಇವನೇ ಆತ್ಮನೋ, ಇವನೇ ಆತ್ಮನೋ ಇವನೇ ಲೋಕವೋ ಆ ನಾವು ಪ್ರಜೆಯಿಂದ ಏನು ಮಾಡೋಣ —ಬೃಹದಾರಣ್ಯಕ

ಯಾವ ದುಃಖವೂ ಇಲ್ಲದ ಅದ್ವಿತೀಯ ಚೈತನ ರೂಪವೇ ನಾನು ಎಂಬ ಆತ್ಮಾನುಭವವನ್ನು ಪಡೆದವರು ಹೇಳುವ ಮಾತಿದು.

ಆತ್ಮನನ್ನು ಅರಿತುಕೊಂಡೆನೆಂದು ಭ್ರಮಿಸಿದ ವಿರೋಚನನೆಂಬ ದೈತ್ಯನು ದೇಹವೇ ಆತ್ಮನೆಂದು ತಿಳಿದಿದ್ದನಂತೆ. ಅದನ್ನು ಬೆಳೆಸಿಕೊಬ್ಬಿಸುವುದು, ಅಲಂಕರಿಸುವುದು ಮೊದಲಾದದ್ದೇ ತನ್ನ ಕರ್ತವ್ಯವೆಂದು ಭಾವಿಸಿದಂತೆ. ಆದರೆ ಆತ್ಮನು ಕರ್ಮರಹಿತನು, ಭಾವಾಭಾವಗಳನ್ನಳಿದ ಸ್ವಭಾವದವನು ಎಂಬ ವಿಷಯವೇ ಅವನ ಅರಿವಿಗೆ ಬರಲಿಲ್ಲವಂತೆ.

ಇಂದು ವಿರೋಚನನ ಅನುಯಾಯಿಗಳೇ ಎಂದಿನಂತೆ ಹೆಚ್ಚಿನ ಸಂಖೆಯವರು. ತಾನುಂಟೋ ಮೂರು ಲೋಕವುಂಟೋ ಎಂದು ಉದ್ಗರಿಸುವವರೇ ಅವರೆಲ್ಲಾ. ಪ್ರಜೆಯಿಂದ ನಮಗೇನು ಎಂದು ತಮ್ಮ ಸ್ವಾರ್ಥವನ್ನೇ ಹೆಚ್ಚಿನದೆಂದು ಭಾವಿಸುವವರು ಅವರೆಲ್ಲಾ.

ಮತ್ತಿನ್ನೇನು ? ದೊಂಬಿ, ಕೊಲೆ, ಚೀರಾಟ, ತೂರಾಟ, ಘೂಷಣೆ, ಕನ್‌ಫ್ಯೂ ಷನ್ !

ಯಾವ ಸಮಸ್ಯೆ ಬಗೆ ಹರಿಯಲು ಬಿಡಕೂಡದೆಂದು ಕಂಕಣಬದ್ಧರಾಗಿ ಹೋರಾಡಲು ಸರ್ವ ದುರ್ಮಾರ್ಗಗಳನ್ನೂ ಅನುಸರಿಸುವವರು ಇರುವಾಗ !

ಅಪರಂಜಿಗೆ ನಗುಬರುತ್ತದೆ. ಇದೇ ಏನು ಮಹಾತ್ಮರ ಭಾರತ ? ಕೇವಲ ಮೂವತ್ತೆಂಟು ವರ್ಷಗಳೊಳಗೇ ಹಿಂಸೆ, ಕಂಪ್ರೂ ಟರಾವಲಂಬನೆಗೆ ಇಳಿಯುತ್ತೇವೆಂದು ಮಹಾತ್ಮರು ಭಾವಿಸಿದ್ದರೇ ? ಸಖಿದಸ ಪ್ನ ನನಸಾಗಲೆಂದು ಹರಕೆ ಕಟ್ಟಿಕೊಂಡಿದ್ದಾಳೆ ಅಪರಂಜಿ.

ಅಪರಂಜಿ ಕಿಡಿ

—ಆನಂದ್

ಅಪರಂಜಿಗೆ ಚಂದಾದಾರರಾಗಿ ಎಂದು ಕೇಳಿದಾಗ, ಕನ್ನಡಿಗರೊಬ್ಬರು **Life-Membership** ಎಷ್ಟು ?" ಎಂದರಂತೆ.

ಆಗ ತಲೆ ಸುತ್ತು ಬಂದ ಅಪರಂಜಿ ಕಾರ್ಯಕರ್ತರು ಈಗ ಚೇತರಿಸಿ ಕೊಂಡಿದ್ದಾರೆ !

* * * * *

ಮಂತ್ರಿಗಳೊಬ್ಬರ ಟೆಲಿಫೋನ್ ಬಿಲ್ ಒಂದು ಲಕ್ಷಕ್ಕೂ ಹೆಚ್ಚು ಆಯಿತಂತೆ.

—ಸುದ್ದಿ

ಅವರಿಗೆ ಅಷ್ಟು ನಲ ಸರಿಯಾದ ನಂಬರ್‌ಗಳು ಸಿಕ್ಕಿದ್ದೇ ಆಶ್ಚರ್ಯ !

* * * * *

ರೈಲು ರೋಕೋ ಎದುರಿಸಲು ತಮಿಳುನಾಡು ಸರಕಾರ ಸಿದ್ಧ

—ಪತ್ರಿಕೆ

ಅರ್ಥವಾಯಿತು, ರೈಲುಗಳನ್ನು ಮೊದಲೇ ನಿಲ್ಲಿಸಿ ಬಿಡುವುದು ! !

* * * * *

ಶ್ರೀಲಂಕಾ ಹಿಡಿತದಲ್ಲಿ ಭಾರತ

—ಕ್ರೀಡಾ ಪುಟ

ಈ ಶೀರ್ಷಿಕೆ ಮೊದಲ ಪುಟದಲ್ಲಿರಬೇಕಾಗಿತ್ತೇನು ?

* * * * *

ಸರ್ಕಾರಿ ಉದ್ಯೋಗಕ್ಕೆ ಕನ್ನಡ ಜ್ಞಾನ ಅತ್ಯಗತ್ಯ

—ಶೀರ್ಷಿಕೆ

5

ನಿಜ, ಮೂಮೂಲು ಪದಗಳಾದರೂ ಗೊತ್ತೇ ಇರಬೇಕು !

* * * *

ಪಂಜಾಬ್ ಚುನಾವಣೆ ಕಣದಲ್ಲಿ 852 ಮಂದಿ

—ಸುದ್ದಿ

ಚುನಾವಣೆ ಪೊತ್ತಿಗೆ ಎಷ್ಟು ಜನ ಉಳಿಯುತ್ತಾರೋ ?

* * * *

ನಂ ಕ್ಲಬ್ಬಿನಲ್ಲಿ

—ಆನಂದ್

ಆ ದಿನ ಸಂಜೆ ಕ್ಲಬ್ಬಿನಲ್ಲಿ ಜಾದೂ ಪ್ರದರ್ಶನ ಒಂದನ್ನ ಏರ್ಪಡಿಸಿದ್ದರು. ಏನೆಲ್ಲ ಜಾದೂ ತೋರಿಸಿದ ಅಂತೀರಿ ! ಮಕ್ಕಳಿಗೆಲ್ಲ ಸಂತೋಷ. ನಾವು ಚಪ್ಪಾಳೆ ತಟ್ಟಿ ಕೈ ನೋವು ಮಾಡಿಕೊಂಡ್ವಿ. ಒಂದು ಟ್ರಿಕ್ ಚೆನ್ನಾಗಿತ್ತು. ಒಂದು ಖಾಲಿ ಟೋಪಿ ತೆಗೆದುಕೊಂಡು, ಅದು ಖಾಲಿ ಅಂತ ನಮಗೆಲ್ಲ ತೋರಿಸಿದ, ಮರುಕ್ಷಣದಲ್ಲಿ ಅದರೊಳಗಿಂದ ಒಂದು ರೂಪಾಯಿ ನೋಟುಗಳು ಸುರಿಯುಕ್ಕೆ ಶುರು ! ನಿಜವಾದ ನೋಟುಗಳ ಹಾಗೇ ಇದ್ದವು. ನಾವೆಲ್ಲ ಬೆರಗಾದವು. ಜಾದೂ ಪ್ರದರ್ಶನ ಮುಗಿಯಿತು. ಕ್ಲಬ್ಬಿನ ಕಾರ್ಯದರ್ಶಿ, ಜಾದೂಗಾರನಿಗೆ ವಂದನೆ ಅರ್ಪಿಸುತ್ತಾ, ಇವರು ಬ್ಯಾಂಕಲ್ಲಿ ಕೆಲಸ ಮಾಡ್ತಾರೆ. (ನಗರದ ಬಡಾವಣೆ ಹೆಸರು ಹೇಳಿದರು) ಹವ್ಯಾಸ ಜಾದೂ ಮಾಡೋದು !" ಅಂದರು.

ನಾವೆಲ್ಲ ಹೊರಕ್ಕೆ ಬಂದೆವು. ರಾಜು ಮಾತ್ರ ಯಾಕೋ ಪೆಚ್ಚು ಮುಖ ಮಾಡಿಕೊಂಡಿದ್ದ ! ಯಾಕೋ ರಾಜು, ಸಪ್ಪೆ ಮುಖ ಅಂದೆ. "ಆನಂದ್, ನನ್ನ ಇರೋ ಪುಡಿಗಾಸೆಲ್ಲ ಇವನು ಕೆಲಸ ಮಾಡ್ತಿರೋ ಬ್ಯಾಂಕಲ್ಲೇ ಇದೆಯಲ್ಲೋ' ಅಂತ ರಾಜು ಹಲುಬಿದ ! ನಿಧಾನವಾಗಿ ಅವನ್ನ ಬಾರಿನತ್ತ ಕರೆದೊಯ್ದೆ.

ಜನವರ್

—ಶಿವು

ತಿಂಗಳ ಕೊನೆಯಾಗುತ್ತಾ ಬಂತು. ಇನ್ನೂ ಬರಹ ಸಿದ್ಧವಾಗಿಲ್ಲ. ಭಾನು ವಾರವಾದರೂ ಆರಾಮವಾಗಿ ಕೂತು ಏನಾದರೂ ಬರೆಯೋಣವೆಂದರೆ, ಈ ಟೀವೀ ಗಲಾಟೆ. ಬೆಳಗ್ಗೆ ಒಂಭತ್ತು ಘಂಟೆಗೇ ಶುರುವಾಗುತ್ತೇ ನೋಡಿ ರಾಮಾಯಣ. ಅಕ್ಕಪಕ್ಕದ ಮನೇ ಮಕ್ಕಳೆಲ್ಲಾ ನಮ್ಮನೇಲೇ ಠಿಕಾಣಿ. ಕಾರಣ ಕಲರ್ ಟೀವಿ. ಮಧ್ಯಾಹ್ನ ಊಟವಾದ ಮೇಲೆ, ಸ್ವಲ್ಪ ಮಲಗಿ, ನಾಲ್ಕು ಘಂಟೆಗೇ ಎದ್ದು ಪಟ್ಟಾಗಿ ಕೂತು ಬರೆಯೋಣವೆಂದು ನಿರ್ಧರಿಸಿದೆ. ಎದ್ದಾಗ ಐದೂವರೆ. ಮನೆ ಯಲ್ಲಿ ಎಲ್ಲರ ಬಾಯಲ್ಲೂ ಒಂದೇ ಮಾತು. "ಜನಮ್" "ಏನೇ ಇದು ಜನಮ್?" ಅಂತ ಟೀನ್‌ಏಜ್ ಕುವರಿಯನ್ನು ಕೇಳಿದೆ.

"ಜನಮ್ ಗೊತ್ತಿಲ್ವೇನಪ್ಪಾ–ಸರಿಯಾಯ್ತು. ಯಾವ ಕಾಲ್ದಲ್ಲಿದ್ದೀಯಾ. ಮಹೇಶ್‌ಭಟ್ ದಿಗ್ದರ್ಶಿಸಿರೋ ಪಿಕ್ಚರಪ್ಪಾ ಅದು. ಇವತ್ತು ಸಾಯಂಕಾಲ ಟೀವೀಲೇ ಅದನ್ನ ಮೊದಲ ಬಾರಿ ಬಿಡುಗಡೆ ಮಾಡ್ತಾರಂತೆ. ಅದಕ್ಕೆ ನನ್ನ ಸ್ನೇಹಿತೆಯರೆಲ್ಲಾ ಇಲ್ಲೇ ಬರ್‍ತಿದಾರೆ"

ಇದ್ಯಾವ ಮಹೇಶಭಟ್ಟನಪ್ಪಾ. ಈ ಭಟ್ಟರೆಲ್ಲಾ ಸಿನಿಮಾ ತಯಾರಿಕೆ ಶುರು ಮಾಡಿದರೆ ಹೋಟೆಲುಗಳ ಗತಿ ? ಎಂದೆಲ್ಲಾ ಯೋಚನೆ ಬಂತು. ಹೇಗೇ ಇರಲಿ ನೋಡೇ ಬಿಡೋಣ ನಮ್ಮ ಭಟ್ಟರ ಪ್ರಯತ್ನಾನಾ ಅಂತ ನಾನೂ ಕೂತೆ.

ಚಿತ್ರ ಶುರುವಾಗಕ್ಕೆ ಮುಂಚೆ ನನ್ನ ಹೆಂಡ್ತಿ ಹೇಳಿದಳು. "ಇಂಡಿಯಾ ಟುಡೇಲಿ ಬಂದಿತ್ತೂರಿ. ಇದು ಮಹೇಶಭಟ್ಟರ ಆತ್ಮಕಥೆ ಅಂತೆ. ಎಷ್ಟು ಧೈರ್ಯರ್ರೀ ಅವರಿಗೆ. ಹೀಗೆಲ್ಲಾ ಪಬ್ಲಿಕ್ಕಾಗಿ ತಮ್ಮ ಸ್ವಂತ ವಿಚಾರಾನೇ ಚಿತ್ರೀ ಕರಿಸುಕ್ಕೆ !"

"ಅದೇನೇ ಅಂಥದ್ದು. ಆತ್ಮಕಥೆ ನೋಡುಕ್ಕೆ ಧೈರ್ಯಬೇಕು. ಹೇಳುಕ್ಕೆ ಯಾಕೆ ಧೈರ್ಯ ? ಅಂಥಾದೇನು ಮಾಡಿರೋದು ಅವನು ?" ನಾನೂ ಕುತೂಹಲ ದಿಂದ ಕೇಳಿದೆ.

''ಥೂ ಹೋಗ್ರಿ ! ನೀವೇ ಓದಿ ನೋಡಿ ಆ ವಿಮರ್ಶೆನಾ. ಮಕ್ಕಳ ಮುಂದೆ ಇದೆಲ್ಲಾ ಹೇಳುಕ್ಕಾಗುತ್ಯೇ ?"

"ಅಲ್ವೇ, ಅದೇ ಮಕ್ಕೆ ಈ ಚಿತ್ರ ನೋಡ್ಬೇಕೂ ಅಂತ ಆಗಿಂದ ಕೂತಿದೆಯಲ್ಲೇ. ಅಲ್ಲದೇ ದೇಶದ ಮೂಲೆ ಮೂಲೆಗಳಲ್ಲೂ Prime time ನಲ್ಲೇ ಚಿತ್ರಿಕರಿಸ್ತಿದ್ದಾರಲ್ಲೇ ಈ ಚಿತ್ರಾನ ! ಹೋಗ್ಲಿ ಅದೇನು ಕೊಡು ನೋಡೋಣ"

ಆ ಪುಸ್ತಕದಲ್ಲಿದ್ದದ್ದು ಇಷ್ಟು. ಇದು ಒಬ್ಬ ಯುವಕ, ತನ್ನ ತಂದೆ ತನ್ನ ತಾಯಿಯನ್ನ ಅಗ್ನಿ ಸಾಕ್ಷಿಯಾಗಿ ಮದುವೆಯಾಗಿಲ್ಲಾ ಎಂಬ ಕಠೋರ ಸತ್ಯವನ್ನ ಒಮ್ಮೆಲೇ ತಿಳಿಯುತ್ತಾನೆ. ಕೊನೆಗೆ ತನ್ನ ತಂದೆ, ತನ್ನನ್ನ ಮತ್ತು ತನ್ನ ತಾಯಿಯನ್ನ ಕ್ರಮವಾಗಿ ಮಗ ಮತ್ತು ಹೆಂಡತಿ ಎಂದು ತಿಳಿಯುವಂತೆ ಮಾಡುತ್ತಾನೆ. ಓದಿ ಮುಗಿಸುವ ಹೊತ್ತಿಗೆ ಶುರುವಾಯಿತು ಚಿತ್ರ.

ಚಿತ್ರಕಥೆ ಏನಂತೀರಿ. ಈ ಯುವಕ, ತನ್ನ ಹುಟ್ಟಿನ ಬಗ್ಗೆ ಸತ್ಯವನ್ನು ಮನಗಂಡ ತಕ್ಷಣ, ಒಂದು ಅವಾರ್ಡ್ ವಿನಿಂಗ್ ಚಿತ್ರ ತಯಾರಿಸುತ್ತಾನೆ. ಅದರ ಹೆಸರೇ ಆತ್ಮ ಕಥಾ. ಅದರಲ್ಲಿ (ನೀವು ಊಹಿಸಿದಂತೆ) ಒಬ್ಬ ಯುವಕ ತನ್ನ ಜನ್ಮ ರಹಸ್ಯ ತಿಳಿಯುವ ಕಥಾವಸ್ತು. ಎರಡು ಕನ್ನಡಿ ಎದರು ಬದರಾಗಿಟ್ಟರೆ ಕಾಣಿಸುಲ್ವೇ ಕನ್ನಡೀ ಒಳಗಿನ ಕನ್ನಡೀ ಒಳಗಿನ ಕನ್ನಡಿ ಹಾಗೆ. ಕೊನೇಗೆ ಹುಡುಗನ ತಂದೆ ಬಂದು ತಾನೇ ಮಗನಿಗೆ ಅವಾರ್ಡ್ ಕೊಡುವುದರೊಂದಿಗೆ ಮುಗಿಯುತ್ತೆ ಚಿತ್ರ.

ಚಿತ್ರವೇನೋ ಒಳ್ಳೇ ಅಭಿರುಚಿಯಿಂದ ತಯಾರಿಸಿದಂತಿದ್ದರೂ ಏನೋ ಒಂದು ರೀತಿ ಮೋಸ ಹೋದ ಭಾವನೆ. ಅಲ್ಲಾ ಎಲ್ಲರೂ ತಮ್ಮ ಆತ್ಮಕಥೆ ಅಂತ ಚಿತ್ರ ಮಾಡಿ, ಆ ಚಿತ್ರದ ನಾಯಕ ಕೂಡ ತನ್ನ ಆತ್ಮಕಥೇ ಅಂತ ಚಿತ್ರ ಮಾಡುವಂತೆ ಮಾಡಿದರೆ, ಸೃಜನ ಶೀಲತೆ ಎಲ್ಲಿ ಅನ್ನೋ ಪ್ರಶ್ನೆ ಬರುತ್ತೆ ಅಲ್ವೇ. ಪರವಾಗಿಲ್ಲಾ ನಮ್ಮ ಭಟ್ಟರು. ಮದುವೇ ಮನೆ ಸಾರು ಮಾಡಿದ ಹಾಗೆ. ಫ್ಲೇವರ್ ಒಂದನ್ನೇ ಭದ್ರವಾಗಿ ಹಿಡಿದು, ಚಿತ್ರಾನೇ ತಯಾರಿಸಿ ಬಿಟ್ರಲ್ಲಾ. ಎಲ್ಲಾರೂ ಹೀಗೆನೇ ಮಾಡುಕ್ಕೆ ಶುರು ಹಚ್ಚಿದರೆ, ಕ್ರಿಯೇಟಿವಿಟಿ ಗತಿ ಏನೂ ಅನ್ನಿಸ್ತು. ಕೇಳೇ ಬಿಟ್ಟೆ ನನ್ನ ಕುವರೀನ. ಬಂತುನೋಡಿ ಬಾಣದಂತೆ ಉತ್ತರ.

"ನೀವೀಗ ಬರ್‍ದಿರೋದು ಇನ್ನೇನೂ ಅನ್ಕೊಂಡಿದೀರಾಪ್ಪಾ !"
ಮನುಜನಿಗೆ ಮಗು ತಂದೆ ಅಲ್ಲವೇ !

ಅ. ಸಂ. ಅವರಿಗೊಂದು ಪತ್ರ

—ಕೇಫ

ಮಿತ್ರರೆ,

ಚಿ|| ಗೋಪಣ್ಣನ ಹೊಟ್ಟೆ ಹುಳುಗಳು (ಅಪರಂಜಿ–ಆಗಸ್ಟ್ 85) ಏನಾದು ವೆಂದು ತಿಳಿದುಕೊಳ್ಳುವ ಸಲುವಾಗಿ ಹಲವಾರು ಕಡೆಗಳಿಂದ ನನಗೆ ಪತ್ರಗಳು ಬಂದಿವೆ. ಧಾರವಾಡದ ಮಂದಿಯೊಬ್ಬರಿಂದ ಕೂಡ ನನಗೆ ಆ ಬಗ್ಗೆ ಪತ್ರ ಬಂದಿರು ವುದನ್ನು ಗಮನಿಸಿದರೆ ಗೋರ್‍ನಳ್ಳಿ ಗೋಪಣ್ಣನ ಹೊಟ್ಟೆ ಹುಳುವಿನ ಪ್ರಭಾವವು ಎಷ್ಟರಮಟ್ಟಿಗಿವೆಯೆಂದು ನಿಮಗೇ ಮನದಟ್ಟಾಗುತ್ತದೆ. ಓದುಗರನ್ನು ಕೆರಳಿಸಿ, ಮತ್ತೆ ತಣಿಸುವುದು ನಿಮ್ಮ ಕರ್ತವ್ಯವಾಗಿರುವುದರಿಂದ. ನನ್ನ ಈ ಪತ್ರಕ್ಕೆ ಸ್ಥಳಾವ ಕಾಶ ಮಾಡಿ 'ಅಪರಂಜಿ'ಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ.

ಐತಾಳರು—ಅಥವಾ ಅಡಿಗರೋ ? ತಮ್ಮ ನಶ್ಯದ ಡಬ್ಬಿ ಹತ್ರವಿಟ್ಕೊದ್ದ ಗೋಪಣ್ಣನ ಹೊಟ್ಟೆಹುಳು ಔಷಧಿ ಪಟ್ಟಣದ ಬಗ್ಗೆ ವಿಚಾರಿಸಲು ಮೂಕಮ್ಮ ನಿದ್ದಲ್ಲಿಗೆ ಹೋಗಿದ್ದ ಪರಮೇಶ್ವರಯ್ಯ—ಎಷ್ಟು ಹೊತ್ತಾದರೂ ನಾನಿದ್ದಲ್ಲಿಗೆ ಬರಲೇ ಇಲ್ಲ. ನಾನು ದೊಡ್ಡ ಸಾಹುಕಾರ್‍ರಿಗೆ ನಮಸ್ತೆ ಹೇಳಿ ನನ್ನ ದವಾಖಾನೆಗೆ ಬಂದೆ.

ಮೂರು ದಿನಗಳವರಿವಿಗೂ ಯಾವ ಸಮಾಚಾರವೂ ಬರಲಿಲ್ಲ. ನಾಲ್ಕನೆಯ ದಿನ ಗೊರ್‍ನಳ್ಳಿ ಮನೆಯ ಶಾನುಭೋಗ ಕಾಡಪ್ಪ—ಅವರ ಮಗನನ್ನು ನನ್ನ ದವಾ ಖಾನೆಗೆ ಕರೆತಂದರು.

ಗೋಪಣ್ಣನ ಹೊಟ್ಟೆಹುಳು ಬಗ್ಗೆ ವಿಚಾರಿಸಿದೆ.

"ಕ್ಷಮ್ಸಿ ಮಾರಾಯ್ರು, ಸಾಹುಕಾರ್‍ರತ್ರ ನಾನು ಹ್ಯಾಂಗ್ ಮಾರಾಯ್ರು ಈ ವಿಷ್ಯ ಎತ್ತೋದು ? ಅಂಥಾ ದೊಡ್ಡೋರ ಮನೆ ಹುಡುಗನಿಗೂ ಹೊಟ್ಟೆಹುಳು ಇದೆ ಅಂತ ನಾನು ಸಂಶಯಪಡೋದೆಂತು—ಮಾರಾಯ್ರು? ನಾನಿಲ್ಲಿಗೆ ಬಂದಿರೋದು ಕೂಡ ಸಾಹುಕಾರ್‍ರಿಗೆ ಗೊತ್ತಿಲ್ಲ. ಇವತ್ತು ನಮ್ಮಪ್ಪಯ್ಯ ಶ್ರಾದ್ಧ ಇತ್ತು ಅಂತ

ಮದ್ಯಾಹ್ನ ನಾನವರಲ್ಲಿಗೆ ಹೋಗಲಿಲ್ಲ. ಶ್ರಾದ್ಧ ಮುಗಿಸಿ ಈ ಮಾಣೀನ ನಿಮ್ಮಲ್ಲಿಗೆ ಕರ್ಕೊಂಡು ಬಂದೆ" ಅಂದರು.

ಮಾರನೇ ವರ್ಷ ನನಗೆ ವರ್ಗವಾಗಿ ನನಗೂ ಗೋರ್ನಳ್ಳಿಗೂ ಸಂಬಂಧ ಕಡಿದುಹೋಯ್ತು.

ಈಗ ಗೋರ್ನಳ್ಳಿ ಗೋಪಾಲಕೃಷ್ಣಯ್ಯ ಸಿಕಂದರಾಬಾದಿನಲ್ಲಿದ್ದಾನಂತೆ. ಬ್ಯಾಂಕಿನಲ್ಲಿ ಆಫೀಸರಂತೆ, ಮದುವೆಯಾಗಿ ಎರಡು ಮಕ್ಕಳು ಇವೆಯಂತೆ. 'ಅಪರಂಜಿ' ವಾಚಕರ ಸಲುವಾಗಿ ನಾನು ಅವನ ಅಡ್ರೆಸ್ ಪತ್ತೆಹಚ್ಚಿ, ಅವನಿಗೆ ಪತ್ರ ಬರೆದು ಲೇನ್ನಿ ಡಾಕ್ಟರ್ ಕೊಟ್ಟಿದ್ದ ಹೊಟ್ಟೆಹುಳು ಔಷಧಿ ಬಗ್ಗೆ ವಿಚಾರಿಸಿ ತಿಳಿದು ಕೊಂಡು ನಿಮ್ಮ ಮೂಲಕ ವಾಚಕರಿಗೆ ತಿಳಸುತ್ತೇನೆ. ಇದರಲ್ಲಿ ಒಂದೇ ಸಮಸ್ಯೆ ಎಂದರೆ—ಗೋಪಣ್ಣ ತನ್ನ ಹೊಟ್ಟೆಹುಳುವಿನ ಬಗ್ಗೆ ತಿಳಿಸುವ ಬದಲು, ಅವನ ಮಕ್ಕಳ ಹೊಟ್ಟೆಹುಳುವಿನ ಬಗ್ಗೆ ತಿಳಿಸುವ ಸಾಧ್ಯತೆ ಇದೆ. ಈ ಅನಾಹುತಕ್ಕೆ ನೀವೂ ನಿಮ್ಮ ವಾಚಕರೂ ತಯಾರಿದ್ದೀರೋ ?

ಈ ವಿಷಯದಲ್ಲಿ ನನ್ನ ಆಪ್ತೈರು ಮನಸ್ಸಿನ ಸ್ಥಿತಿ ಹೇಗಿದೆ ಎಂದರೆ ನೀವುಂಟು ನಿಮ್ಮ ಗೋಪಣ್ಣನ ಹೊಟ್ಟೆಹುಳುವುಂಟು—ಎಂದು ಹೇಳಿಬಿಡುವಷ್ಟು ನಾಜೂಕಾಗಿದೆ.

ಪತ್ರದಲ್ಲಿ ಹೊಟ್ಟೆ—ಕ್ಷಮ್ಸಿ...ಖಾರವಿದ್ದರೆ ದಯವಿಟ್ಟು ಕ್ಷಮಿಸಿ,

ಇಂತು ನಿಮ್ಮವ

—ಕೇಫ"

10

ಯಾತ್ರಿಕರ ಪತ್ರ

—ಕೇ ಫ

"ತಲಕಾಡು ಇನ್ನು ಎಷ್ಟು ದೂರವಿದೆಯೋ ?"

"ಯಾರಿಗೆ ಗೊತ್ತು ? ಹೋಗ್ತಾ ಹೋಗ್ತಾ ಹತ್ರಾ ಆಗ್ತಾ ಇದೆ"

"ಅಂದ್ರೆ ನಾವು ತಲಕಾಡು ದಾರೀಲೇ ಹೋಗ್ತಾ ಇದ್ದೇವೆ ಅನ್ನು"

"ಅನುಮಾನ ಬಂದ್ರೆ ದಾರೀಲಿ ಯಾರನ್ನಾದ್ರೂ ಕೇಳಿದರಾಯ್ತು

ಈ ಸಂಭಾಷಣೆ ನಡೆದದ್ದು ರಾಜ–ಚಂದಿ ಮಧ್ಯೆ. ಸ್ಥಳ—ಕುಂಟ್ನಳ್ಳಿ. ನೀರೂ ಟಿಕೆ ಕಂಬದ ಹತ್ರ ಒರಕ್ಕೊಂಡು ನಿಂತಿದ್ದಾಗ. ನಾವು ನಿಂತಿದ್ದ ಜಾಗ ಕುಂಟ್ನಳ್ಳಿ ಜಾತ್ರೆ ನಡೆಯುವ ಸ್ಥಳ. ನಮ್ಮ ಹತ್ತಿರವೆ—ಜಾತ್ರೆ ಕಾಲದಲ್ಲಿ ಜನರಿಗೆ . ನೀರು— ನೀರುಮಜ್ಜಿಗೆ ಮುಫತ್ತಾಗಿ ಒದಗಿಸೋ ಕಲ್ಲು ಮಂಟಪವಿತ್ತು.

"ಲ್ರೋ ಇಲ್ನೋಡ್ರೋ ವಿಕ್ರಮಾದಿತ್ಯನ ಕಾಲದ ಒಂದು ಪತ್ರ ಸಿಗ್ತು"—ಅಂತ ಯಾವ ಮಾಯದಲ್ಲೋ ಮಂಟಪದ ಹಿಂದೆ ಹೋಗಿದ್ದ ಚಂದಿ ಕೈಯ್ಯಲ್ಲಿ ಏನೋ ಹಿಡಿದುಕೊಂಡು ಬಂದ.

ರಾಜ ಅದನ್ನು ಚಂದಿ ಕೈಯಿಂದ ಕಸುಕೊಂಡ. ಹಿಂದೆ ಮುಂದೆ ತಿರುಗಿಸಿ ನೋಡಿ ನನ್ನ ಕೈಗೆ ಕೊಟ್ಟ. ನಾನೂ ನೋಡಿದೆ. ಪತ್ರದ ಆಕಾರ ನಮ್ಮ ಅಂಚೆ ಕಾರ್ಡ್ ತರವಿತ್ತು. ಆದರೆ ಅದರಲ್ಲಿದ್ದ ಸ್ಟ್ಯಾಂಪ್ ಮಾತ್ರ ತುಂಬಾ ಹಳೇ ಕಾಲದ್ದು—ಪ್ರಾಯಶಃ ವಿಕ್ರಮಾದಿತ್ಯನದೋ ಶಾಲೀವಾಹನದೋ ಇರಬೇಕೆಂದುಕೊಂಡೆ. ಪ್ರಾಯಶಃ ಪ್ರೊಫೆಸರ್ ಗುರುರಾಜಭಟ್ಟರಿದಿದ್ದರೆ ಅವರು ತಕ್ಷಣ ಅದನ್ನು ಕಂಡುಹಿಡಿದುಬಿಡ್ತಿದ್ದರು. ಅವರು ಈ ಪುರಾತನ ವಸ್ತುಗಳನ್ನೆಲ್ಲಾ ಸಂಶೋಧನೆ ಮಾಡ್ತಾ ಇದ್ರಂತೆ. ಅವರೀಗಿದ್ದಿದ್ರೆ ಈ ಕಾರ್ಡನ್ನ ಏನ್ಮಾಡ್ತಿದ್ರು ? ಅಂತ ಯೋಚ್ನೆ ಮಾಡಿ—ರಾಜ ಸಲಹೆ ಮಾಡಿದ ಹಾಗೆ ಆ ಕಾರ್ಡನ್ನ ಮೊದಲು ಕ್ಲೀನ್ ಮಾಡಿದೆವು.

ಸ್ಟಾಂಪು—ಒಬ್ಬ ಕಿರೀಟಧಾರಿ ದೋರೇದು. ಆದರೆ ಅದರಲ್ಲಿ ಬರೆದಿದ್ದ ಅಕ್ಷರ ಇಂಗ್ಲೀಷು ! "INDIA POSTAGE—THREE PIES" ಅಂತ ಇತ್ತು.

ನಮ್ಮಲ್ಲಿ ರಾಜ ಮೋಡಿ ಅಕ್ಷರ ಓದೋದ್ರಲ್ಲಿ ಎಕ್ಸ್‌ಪರ್ಟು. ಏಕೆಂದ್ರೆ ಅವನು ಬರೆದ ಅಕ್ಷರಾನ ಅವನೇ ಪುನಃ ಓದಬೇಕು. ಈ ಪತ್ರವನ್ನ ಅವನಿಂದ್ಲೆ ಓದಿಸಿದೆವು,

"ಮ॥ರಾ॥ಶ್ರೀ॥ ಕುಂಟ್ನಳ್ಳಿ ತಿಮ್ಮಪ್ಪಯ್ಯನವರಿಗೆ—

ಮುಖ್ಯೋಪಧ್ಯಾಯರು.

ಪ್ರೈಮರಿ ಸ್ಕೂಲ್. ಮಾಮೂಲ್‌ಪೇಟೆ, ಬೆಂಗಳೂರು ಸಿಟಿ ಅವರಿಗೆ ಕಾಗದ ಬಂದಿತ್ತು.

"ಮ॥ರಾ॥ಶ್ರೀ॥ ತಿಮ್ಮಪ್ಪಯ್ಯನವರಿಗೆ ತುಂಕೂರು ಸೂರ್ಯನಾರಾಯಣಯ್ಯನ ನಮಸ್ಕಾರ. ಕಳೆದ ವಾರ ತಾವು ನಮ್ಮಲ್ಲಿಗೆ ಬಂದು ಮಾತನಾಡಿದ ವಿಷಯ ನಮಗೆ ಸಂತೋಷವನ್ನು ಉಂಟುಮಾಡಿದೆ. ನನ್ನ ಮಗ ಚಿ॥ ರಾ॥ ವೆಂಕಟೇಶನಿಗೆ ನಿಮ್ಮ ಮಗಳು ಚಿ॥ಸೌ॥ಹ॥ಕುಂ॥ಶೋ॥ ಭಾಗ್ಯಲಕ್ಷ್ಮಿಯನ್ನು ತಂದು ಮದುವೆ ಮಾಡುವುದೆಂದು ನಮ್ಮ ಅಮ್ಮ ಮತ್ತು ಅಪ್ಪಯ್ಯ ನಿರ್ಧರಿಸಿದ್ದಾರೆ, ಮುಂದಿನ ತಿಂಗಳು ಮೂರನೆಯ ಯಾ ನಾಲ್ಕನೆಯ ವಾರ ಲಗ್ನ ಕಟ್ಟಿಕೊಳ್ಳಬಹುದು. ಎಲ್ಲಾ ದೈವೇಚ್ಛೆ.

ನಿಮ್ಮ ತೀರ್ಥರೂಪರಿಗೆ ಮತ್ತು ಶ್ರೀಮತಿಯವರಿಗೆ ನನ್ನ ಮತ್ತು ನನ್ನ ಭಾರ್ಯೆಯ ನಮಸ್ಕಾರ ತಿಳ್ಸಿ.

ಶುಭಮಸ್ತು

ನಿಮ್ಮ ವಿಧೇಯ
ಸೂರ್ಯನಾರಾಯಣ

ಅಂತ ವಿಚಾರ ತಿಳಿಸಿತ್ತು.

"ಷಹಭಾಷ್ ರಾಜಾ ಹಾಗೆ ಪೋಸ್ಟು ಮಾರ್ಕು ನೋಡಿಬಿಡು" ಅಂದ ಚಂದಿ. ರಾಜ ಪೂರ್ತಿ ಫೇಲ್ ಆದ.

ನಾನೂ ನೋಡಿದೆ. ಗೊತ್ತಾಗಲಿಲ್ಲ.

ಚಂದ್ರು ಅಂಚೆ ಮುದ್ರೆನ ನೋಡೋಕೇ ಹೊಗ್ಲಿಲ್ಲ.

"ಲ್ರೋ—ಇದನ್ನ ಇಲ್ಲಿಯ ಪೋಸ್ಟ್‌ಮಾಸ್ತರ ಹತ್ರಾನೇ ತೋರ್ಸೋಣ್ರೋ ಅಂದ ಚಂದಿ. ಅಪರೂಪಕ್ಕೆ ಒಂದು ಒಳ್ಳೆ ಐಡಿಯಾ ಕೊಡ್ತಾ.

ಕುರಟ್ನಹಳ್ಳಿಗೆ ಪ್ರವೇಶಿಸಿ ಅಲ್ಲಿಯ ಪೋಸ್ಟ್‌ಮಾಸ್ಟರ್‌ನ ಹುಡುಕಿ ನಮ್ಮ ಕಾಗ್ದ ತೋರಿಸಿದೆವು. ಕುಂ.ಪೋ·ಮಾ. ನಮ್ಮ ವಸ್ತೂನ ತಿರುಗಿಸಿ ತಿರುಗಿಸಿ ನೋಡಿ "ಇದನ್ನ ಏನು ಮಾಡ್ಬೇಕು ಅಂತೀರ ? ಅಂತ ಕೇಳಿದ.

"ಇದು ಯಾರ ಕಾಲದ್ದು ಅಂತ ಇದರಲ್ಲಿರೋ ಅಂಚೆ ರಸ್ನೆನ ಗುರುತ್ಸಿ ಹೇಳ್ಬೇಕು" ಅಂದ ರಾಜ.

ನಮ್ಮ ಪೈಕಿ ರಾಜ ಒಬ್ಬನಿಗೇ ಈ ಥರಾ ಅಧಿಕಾರಶಾಹೀ ಪದಗಳೆಲ್ಲಾ ಗೊತ್ತಿರೋದು. ಕುಂಟ್ನಹಳ್ಳಿ ಪೋ.ಮಾ. ಸುಮಾರು 30 ವರ್ಷ ವಯಸ್ಸಿನವರು. ಕಾರ್ಡನ್ನು ಪುನಃ ತೀಕ್ಷ್ಣವಾಗಿ ನೋಡಿದರು. ಉಹುಂ—ಅವರಿಗೆ ಏನೂ ತಿಳಿಯಾ ಲಿಲ್ಲ.

"ತಾಳಿ—ನನ್ನಪ್ಪಯ್ಯನ ಕರ್ಕೊಂಡು ಬರ್ತೀನೆ. ಅವರಿಗೆ ಗೊತ್ತಾಗುತ್ತೆ, ಹಿಂದೆ ಅವರು ಅಂಚೆ ಇಲಾಖೇಲಿ ಇದ್ರು ಅಂತ ಪೋ.ಅ. ಹಿಂದುಗಡೆ ಇದ್ದ ಅವರ ಮನೆಯಿಂದ ಅಪ್ಪಯ್ಯನ ಕರ್ಕೊಂಡು ಬಂದ್ರು.

ಅಪ್ಪಯ್ಯ ಕಾರ್ಡನ್ನ ನೋಡಿದರು.

"ಆಹಾ ! ಇದು ಜಾರ್ಜ್ ಸಾರ್ವಭೌಮರ ಕಾಲದ್ದು. ಮೂರು ಕಾಸಿನ ಕಾರ್ಡು" ಅಂದರು.

ಹಾಗೆ ತಮ್ಮ ಕನ್ನಡಕವನ್ನು ಹಣೆಯ ಮೇಲಕ್ಕೆ ಸರಿಸಿ ಕಾರ್ಡನ್ನು ತಮ್ಮ ಮೂಗಿನ ಹತ್ರ ಸರಿಸಿಕೊಂಡು ಪರೀಕ್ಷಿಸಿದರು.

"ಇದು ತುಂಕೂರಿಂದ 1-1-1916ರಲ್ಲಿ ಬರೆದಿದ್ದ ಕಾರ್ಡು—ಬೆಂಗಳೂರಿಗೆ 2-1-1916ರಂದು ಸೇರಿದೆ" ಅಂದರು.

ಮೂರು ಕಾಸು ಅಂದ್ರೆ" ಪೋ.ಮಾ. ಕೇಳಿದ.

"ನಾಲ್ಕಾಣೆ ಅಂದ್ರೆ ಕಾಲು ರೂಪಾಯಿ—ಅಂದ್ರೆ 48 ಕಾಸು. ಆಗಿನ ಕಾಲದಲ್ಲಿ 192 ಕಾಸಿಗೆ ಒಂದು ರೂಪಾಯಿ.

"ಜನಮೇಜಯರಾಯನ ಕಾಲದ ಆರ್ಥಿಕ ವ್ಯವಸ್ಥೆ ವಿವರಿಸೋ ರೀತೀಲಿ ಅಪ್ಪಯ್ಯ ವಿವರಿಸಿದರು.

"3 ಕಾಸು ಅಂದರೆ ಈಗಿನ ಲೆಕ್ಕದಲ್ಲಿ... ?"

"ಆರು ನಯಾಪೈಸೆ ಆಗಿತ್ತು"

ಆ ಸಮಯಕ್ಕೆ ಸರಿಯಾಗಿ ಒಬ್ಬ ಚಿಕ್ಕ ಹುಡುಗ ಮೂರು ಲೋಟಗಳನ್ನ ನಮ್ಮ ಕೈಲ್ಲಿಟ್ಟ,

"ಕುಡೀರಿ ನಿಂಬೇಹಣ್ಣಿನ ಪಾನಕ. ಸೇವಿಸ್ತಾ ಇರಿ ಈಗ್ಲೆ ಬರ್ತೀನಿ" ಅನುತ್ತಾ ಅಪ್ಪಯ್ಯ ಪುನಃ ಒಳಗೆ ಹೋದರು.

ತಮ್ಮ ಕೈಲಿ ಒಂದು ಹಾಳೆ ಹಿಡಿದುಕೊಂಡು ವಾಪಸ್ ಬಂದರು.

"ಇನ್ನೊಂದು ಅದ್ಭುತವಾದ ವಿಷಯ ಕೇಳಿ....1–1–1916ರಲ್ಲಿ ಶನಿವಾರ ವಾಗಿತ್ತು. ನ್ಯೂ ಯಿಯರ್ಸ್‌ಡೇ ರಜಾ ದಿನ 2–1–1916 ಭಾನುವಾರ—ಪುನಃ ರಜಾ ದಿನ. ಅಂದರೆ ಈ ಕಾರ್ಡು ರಜಾ ದಿನಗಳಲ್ಲೇ ವಿಲೇವಾರಿ ಆಗಿತ್ತು" ಅಂದರು.

"ಆಗಿನ ಕಾಲ್ದಲ್ಲಿ ಕೇವಲ ಆರು ಪೈಸೆಗೆ ಸಮಾಚಾರಾನ ಎಂದು ಬೇಕಾದ್ರೂ ಕಳ್ಸಿ ತಿಳಿಯಲೂ ಬಹುದಿತ್ತು ಅನ್ನಿ!" ಅಂದ ಚಂದಿ.


"ಆದರೆ ಈಗ ..

ರಾಜ ನನಗೆ ಮಾತನಾಡೋಕೆ ಬಿಡಲಿಲ್ಲ.

"ಈಗ ವಾರಕ್ಕೆ ಐದೇ ದಿನ ಅಂತ ನಿರ್ಧರಿಸಿಬಿಟ್ಟಿದ್ದಾರಲ್ಲಾ. ಅದು ಎಲ್ಲಾ ಫೀಲ್ಡ್‌ನಲ್ಲೂ ಜಾರಿಗೆ ಬಂದುಬಿಟ್ರೆ ಶುಕ್ರವಾರ ರಾತ್ರಿ 12 ಘಂಟೆಯಿಂದ ಭಾನು ವಾರ ರಾತ್ರಿ 12 ಘಂಟೆವರಿಗೆ ಎವ್ವೆರಿಥಿಂಗ್ ಬಂದ್ !" ಅಂದ.

"ನಾವು ಉಸಿರಾಡೋದೂ ಕೂಡ" ಅಂದ ಚಂದಿ.

ಫ್ರೈಸ್–ಆಫ್–ಫ್ರೀಡಂ !" ಅಂತ ಚರ್ಚಿಲ್ ಥರಾ ಮೂತಿ ಮಾಡ್ಕೊಂಡು ರಾಜ ತೀರ್ಪು ಕೊಟ್ಟ.



ಬಿಲ್ ಜಾಸ್ತಿ ಅಂದ್ರಿ! ಆಪರೇಷನ್ ಮಾಡುವಾಗ ಎರಡು ಕತ್ತಿ ಒಳಗೆ
ಬಿಟ್ಟಿದೀವ್ರಿ, ಆದರ್ದು ಬಿಲ್ ಸೇರಿಸಿಗ್ದೀವಿ ಅಷ್ಟೆ!

15

ಗಿನಿಪಿಗ್ಸ್

—ಜಿ.ಎಸ್.ಜಿ.

ಆದಿನ ಶಾಲೆಗೆ ರಜ. ಉಚಿತ ಪಠ್ಯ ಪುಸ್ತಕ ವಿತರಣೆ ಸರಿಯಾಗಿ ಆಗಿಲ್ಲ. ಪುಸ್ತಕಗಳು ಸಿಕ್ಕೇ ಇಲ್ಲ ಎಂಬ ಕಾರಣಕ್ಕೆ ಮುಷ್ಕರ–ಬಂದ್.

ಮನೆಗೆ ಬಂದೆ. ಊಟ ಹೇಗೂ ಆಗಿತ್ತು. ಸ್ವಲ್ಪ ಬಾಯಾಡಿಸಿ ವಿಶ್ರಾಂತಿ ತೆಗೆದುಕೊಳ್ಳೋಣಾಂತ ಹಾಸಿಗೆ ಹಾಕಿದೆ.

ನನಗೂ ವಿಶ್ರಾಂತಿಗೂ ಆಗಿಬರೋಲ್ಲ. ಏನಿದ್ದರೂ ಶಾಲೆಯಲ್ಲಿ ಸಿಗುವ ವಿಶ್ರಾಂತಿನೇ ಗಟ್ಟಿ. ನನಗೆ ರಜ ಇದ್ದುದರ ಸುಳಿವು ಶ್ರೀಮಾನ್ 'ಜಿ'ಯವರಿಗೆ ಸಿಕ್ಕಿತ್ತು. ಹಾಜರು.

ನಮ್ಮ ರಂಗಣ್ಣನಿಗೆ ನಾವು 'ಜಿ' ಎಂದು ಕರೆಯುತ್ತೇವೆ. ಕಾರಣ ಅವನು ಜಿಜ್ಞಾಸು. ಯಾವುದೇ ವಿಷಯವನ್ನು ಕೂಲಂಕುಷವಾಗಿ ಚರ್ಚಿಸದೇ ಮಂದಟ್ಟು ಮಾಡಿಕೊಳ್ಳದೆ ಮುಂದುವರಿಯುವುದಿಲ್ಲ. ಒಂದು ಚಿಕ್ಕ ವಿಷಯವಾದರೂ ಅದರ ಪೂರ್ವಪರ ವಿವೇಚನೆ ಆಗಲೇಬೇಕು. ಹಾಲು ಚೆನ್ನಾಗಿ ಕಾಯಿಸಿ ಮರಳುವ ಹಾಲಿಗೆ ಡಿಕಾಕ್ಷನ್ ಹಾಕಿ ಮಾಡಿದ ಕಾಫಿಗೂ....ಮರಳುವ ಡಿಕಾಕ್ಷನ್ನಿಗೆ ಹಾಲು ಹಾಕಿ ಮಾಡಿದ ಕಾಫಿಗೂ ರುಚಿಯಲ್ಲಿರುವ ವ್ಯತ್ಯಾಸದ ಮೇಲೆ ಒಂದು ಘಂಟೆ ವ್ಯಾಖ್ಯಾನ ಮಾಡಿ. ತಾನೂ 'ಐಸ್ ಕೋಲ್ಡ್' ಕಾಫಿ ಕುಡಿದು, ನನಗೂ ಅದನ್ನೇ ಕುಡಿಸಿ, 'ಬಿಸಿ–ಬಿಸಿ' ಕಾಫಿಯ ಫ್ಲೇವರ್ ವಿಷಯವಾಗಿ ಪುನಹ ಚರ್ಚೆಯನ್ನು ಮುಂದುವರಿಸುವ ರಂಗಣ್ಣನಿಗೆ ನಾವು ಕರೆಯುವುದು 'ಜಿ' ಎಂದೇ.

ಅಂತೂ ನನ್ನ ನಿದ್ರೆಗೆ ತುಂದು ಬಿತ್ತು. ನನ್ನ ವಿದ್ಯಾರ್ಥಿಗಳ ಅದೃಷ್ಟ. ಅವರಿಗೆ ನನ್ನ ಪಾಠ ತಪ್ಪಿತ್ತು. ನನ್ನ ದುರಾದೃಷ್ಟ 'ಜಿ' ತನ್ನ 'ಡ್ರಿಲ್‌ಬಿಟ್'ನ ಹರಿತ ಮಾಡಿಕೊಂಡು ಬಂದಿದ್ದ. ನನ್ನ ಬೋಕ್ಕ ತಲೆ ಅವನ ಆಯುಧಕ್ಕೆ ತೆರ ವಾಗಿತ್ತು.

"ಅಲ್ಲಪ್ಪಾ ಈ ಗಿನಿ ಪಿಗ್ಸ್ ಅಂತಾರಲ್ಲ ಅವು ಏನು?"

"ಪ್ರಯೋಗ ಪಶುಗಳು"

"ನಿನ್ನ ನಿಗಂಟುವಿನ ಅರ್ಥ ಬೇಡ – ಜಾಣತನ ತೋರಿಸಬೇಡ. ಒಂದು ಇಲಸ್ಟ್ರೇಷನ್ನಿನಿಂದ ವಿವರಿಸು"

ನನಗೂ ಬೆಳಗಿನಿಂದ ಬಾಯಿಗೆ ವಿರಾಮ ಸಿಕ್ಕಿತ್ತು. 'ಜಿ'ಯನ್ನು ರಿಸೀವಿಂಗ್ ಎಂಡ್‌ನಲ್ಲಿಟ್ಟುಕೊಳ್ಳುವ ಅಪೂರ್ವ ಅವಕಾಶ. ನಾನು ರಿವರ್ಸ್ ಗೇರ್ ಹಾಕಿ 'ಜಿ'ಯನ್ನೇ ಏಕೆ ಗಿನಿ ಪೆಗ್ ಮಾಡಿಕೋಬಾರದು ನನ್ನ ತರ್ಕ ಸರಣಿಗೆ ಎಂದು ಹೊಳೆಯಿತು.

"ರಂಗಣ್ಣ–ಈಗ ಉಚಿತ ಪುಸ್ತಕ ಹಂಚಿಕೆಯನ್ನೇ ತೆಗೆದುಕೋ. ಇದು ಒಂದು ಪ್ರಯೋಗ–ಏನಂತಿ ?"

"ನಿಜವಾಗಲೂ ಉತ್ತಮ ಪ್ರಯೋಗ. ನಮ್ಮ ವಿದ್ಯಾ ಮಂತ್ರಿಗಳನ್ನು ಅಭಿನಂದಿಸಲೇಬೇಕು. ನಾನಂತೂ ನನ್ನ ಮೊಮ್ಮಕ್ಕಳಿಗೆ ಪುಸ್ತಕಕ್ಕೆ ಇಪ್ಪತ್ತೈದು ಪೈಸೆಯಿಂದ ರೂಪಾಯಿ ವರೆಗೆ ಹೆಚ್ಚು ಹೆಚ್ಚು ಕೊಟ್ಟು ಸುಸ್ತಾಗಿದ್ದೇನೆ.

"ಅದೂ ಇರಲಿ. ಈ ಪ್ರಯೋಗ ಫಲ ಕೊಡುತ್ತದೆ ಅಂತೀಯ"

"ನಿಜವಾಗಿಯೂ ಫಲಕಾರಿ ಎನ್ನಿಸುತ್ತೆ. ಆದರೆ ಕಾದು ನೋಡಬೇಕು"
"ಈಗ ನೋಡು ರಂಗಣ್ಣ–ನಮ್ಮ ಕರ್ನಾಟಕದಲ್ಲಿ ಸರ್ಕಾರೀ ಶಾಲೆಗಳ ಪೈಕಿ. ಅವುಗಳಲ್ಲಿ ಓದುತ್ತಿರುವವರ-ನಿಜವಾಗಲೂ ಶಾಲೆಗೆ ಹೋಗುವವರೆಷ್ಟು ಮಂದಿ ? ಶಿಕ್ಷಕರಿದ್ದು ವಿದ್ಯಾರ್ಥಿಗಳಿಲ್ಲದವೆಷ್ಟು ? ವಿದ್ಯಾರ್ಥಿಗಳಿದ್ದು ಶಿಕ್ಷಕರಿಲ್ಲದವೆಷ್ಟು ? ವಿದ್ಯಾರ್ಥಿ ಶಿಕ್ಷಕರು ಇದ್ದು ಕಟ್ಟಡಗಳೇ ಇಲ್ಲದವು ಎಷ್ಟು ? ಮೂರೂ ಇದ್ದು ಪಾಠವೇ ನಡೆಯದವು ಎಷ್ಟು ? ಮೂರೂ ಇಲ್ಲದೆ ರೆಕಾರ್ಡಿನಲ್ಲಿರುವ ಶಾಲೆಗಳೆಷ್ಟು ? ಮತ್ತು...

"ನೀನು ಯಾವಾಗಲೂ ಹೀಗೇನೇ—ಯಳ್ಳಂಬಳಸಯಾಗಿ ಮಾತಾಡ್ತಿ ಅಸಂಬದ್ಧ ಪ್ರಲಾಪ. ಇದು ಒಂದು ಒಳ್ಳೆಯ ಪ್ರಯೋಗ ಸಂತೋಷಪಡೋಣ

"ಸಂತೋಷ ಪಡು–ಅದಕ್ಕಲ್ಲ. ಯಾವುದೇ ಪ್ರಯೋಗಕ್ಕೂ ಪೂರ್ತಿ ಸಿದ್ಧತೆ ಬೇಕು. ಯಾವ ಯಾವ ತರಗತೀಲಿ ಎಷ್ಟೆಷ್ಟು ಜನ ಇದ್ದಾರೆ – ಎಷ್ಟು ಜನಕ್ಕೆ ಪುಸ್ತಕ ಬೇಕು ? ಕಳೆದ ವರ್ಷ ಓದಿದವರ ಬಳಿ ಪಡೆದವರೆಷ್ಟು ? ಪುಸ್ತಕವೇ ಇಲ್ಲದೆ ಓದಿದವರೆಷ್ಟು? ಓದದೇ ಪುಸ್ತಕ ಹೊಂದುವವರೆಷ್ಟು ? ಒಂದು ವರ್ಷಕ್ಕೆ ಕನಿಷ್ಟ ಮೂರು ಸೆಟ್ ಪುಸ್ತಕಗಳಾದರೂ ಹೊಂದುವವರು ಎಷ್ಟು ?

"ಏನೆಯ್ಯಾ ನೀನು ! ಇಲಾಖೆ ಇರೋದು ಯಾಕೆ—ಎಲ್ಲ ಅಂಕಿ ಅಂಶಗಳನ್ನೂ ಒದಗಿಸಿ ಕೊಡುತ್ತೆ"

"ಇಲಾಖೆ ಒದಗಿಸೋ ಅಂಕಿ ಅಂಶಗಳು ಸರಿಯಾಗಿರುತ್ತೆ ಅಂತೀಯ"

"ಇರದೇ ಏನು ಮಾಡುತ್ತೆ ! ಅತ್ಯಂತ ಚಿಕ್ಕಘಟಕದ ಅಧಿಕಾರಿಯಿಂದ ಮೇಲಿನವರೆಗೆ—ಡ್ಯಾಟಾ ಕಲೆಕ್ಟ್ ಮಾಡಿದ್ದಾರೆ"

"ಆದರೂ ಪುಸ್ತಕ ಬೇಕೇ ಬೇಕೂ ಎನ್ನುವವರೆಗೆ ನಿಗದಿಯಾದ ಸಂಖ್ಯೆ ಸಿಗೋದು ಅನುಮಾನ"

"ಉಚಿತ ಹಂಚಿಕೆ ಎಂದರೆ ಎಲ್ಲರೂ ತಗೋತಾರೇ ಅಂತಲೇ ಲೆಖ್ಖ

"ಅದೂ ಸರೀನೆ—ರಂಗಣ್ಣ—ಆದರೆ—ಉಚಿತ ವರ್‍ಕ ಪುಸ್ತಕದ ಬದಲು—ಗೈಡುಗಳನ್ನೊ ಮ್ಯಾಗಜೀನುಗಳನ್ನೊ—ಹಂಚಿ ಪಾಸು ಮಾಡಲು ಇನ್ನೂ ಸುಲಭವಾದ ವಿಧಾನಗಳನ್ನು ಜಾರಿಗೆ ತಂದಿದ್ದರೆ ಪ್ರಯೋಗಕ್ಕೆ ಸಾರ್ಥಕತೆ ಸಿಗ್ತಾ ಇತ್ತು

"ಇದು ಅಲಾಯುದ ಪ್ರಶ್ನೆ....ಈಗ ಪ್ರಚಲಿತವಾಗಿರುವ ಕಾಪಿ ಪ್ರಯೋಗಗಳನ್ನು ನವೀಕರಿಸಿ ಕಾನೂನು ಬದ್ಧವಾಗಿ ಮಾಡಿ ಪ್ರಶ್ನೆ ಪತ್ರಿಕೆಗಳಲ್ಲೇ ಉತ್ತರವನ್ನೂ ಮುದ್ರಿಸಿ ಸರಿಯಾದ ಉತ್ತರವನ್ನೂ.........ಹೋಗಲಿ ಬಿಡು ಆ ವಿಷಯಕ್ಕೂ ಉಚಿತ ಪುಸ್ತಕ ವಿತರಣೆಗೂ ಸಂಬಂಧವಿಲ್ಲ. ಒಟ್ಟಾರೆ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೋ ಅಷ್ಟು ಪುಸ್ತಕಗಳು ಬೇಕು"

"ಅದು ಸರಿ ಒಪ್ಪಿಕೊಂಡೆ ಅಂತ ಇಟ್ಟುಕೋ—ಪುಸ್ತಕಗಳು ಪ್ರಿಂಟಾದವು ಹಂಚಿಕೆ ಸರಿಯಾಗಬೇಕಲ್ಲ ?

"ಇದು ಮೊದಲನೇ ವರ್ಷ—ಎಡೆವಟ್ಟಾಗುತ್ತದೆ – ಕ್ರಮೇಣ ಸರಿ ಹೋಗುತ್ತದೆ"

"ಅಂತೂ ಇದು ಒಂದು ಪ್ರಯೋಗ – ಹಾಗಾದರೆ ಇದರಲ್ಲಿ ಗಿನಿಪಿಗ್ಸ್ ಯಾರೂ ಎಂದಾಯಿತು ?

"ವಿದ್ಯಾರ್ಥಿಗಳು"

"ಅಲ್ಲಾ ಅಲ್ಲೇ ನೀನು ತಪ್ಪಿರೋದು ವಿದ್ಯಾರ್ಥಿಗಳು ಖಂಡಿತಾ ಅಲ್ಲ. ಉಚಿತ ಪುಸ್ತಕ ವಿತರಣೆ ಪ್ರಯೋಗವೇ ಅಲ್ಲ ನಡಿತಾ ಇರೋ ಪ್ರಯೋಗವೇ ಬೇರೆ—ಆ ಪ್ರಯೋಗಕ್ಕೆ ಇದು ಒಂದು ಮಾಸ್ಕ್ ಪ್ರಯೋಗ ನಡೀತಾ ಇರೋದು ರಿಮೋಟ್ ಕಾರ್ನರ್‌ನಿಂದ – ಇದು ಸಫಲವಾದರೆ ಬೇರೆಯುದಕ್ಕೆ ವಿಸ್ತರಿಸ ಬಹುದು"

"ಅರ್ಥವಾಗಲಿಲ್ಲ"

"ಅಷ್ಟು ಸುಲಭವಾಗಿ ಅರ್ಥವಾಗಲ್ಲ – ಸಧ್ಯಕ್ಕೆ ನಮ್ಮ ಮುಂದಿರುವ ಪುಸ್ತಕ ಪುರಾಣವನ್ನು ಮರೆ. ನಮ್ಮ ವಿದ್ಯಾ ಮಂತ್ರಿಗಳು ಯಾರೂ ಎಂದು ನಿನಗೆ ತಿಳಿದಿದೆ – ಸರಿ ಈಗ ನಿನಗೆ ಒಂದು ಕಥೆ ಹೇಳುತ್ತೇನೆ"

"ಇದು ಎಲ್ಲಿಗೋ ಹೋಯಿತು "

"ಎಲ್ಲಿಗೂ ಇಲ್ಲ – ಇದ್ದಲ್ಲೇ ಇದೆ – ಕೇಳು – ಒಂದಾನೊಂದು ಗಣರಾಜ್ಯ– ಅದು ಮಹಾಗಣ N ಆಗಿರಲಿ – A ಅನ್ನೊದು N ಮಹಾಗಣದಲ್ಲಿ ಒಂದು ಉಪಗಣ K ಎಂಬುದು ಅಂಥದೇ ಇನ್ನೊಂದು ಉಪಗಣ. N – ಮಹಾಗಣದ ಪ್ರಧಾನಿ G' R ಮತ್ತು K ಗಣಗಳೇ ಮುಖ್ಯ ಮಂತ್ರಿಗಳು R ಮತ್ತು H. ಇವರದು G ನ ಪಕ್ಷಕ್ಕೆ ವಿರುದ್ಧ ಪಕ್ಷಗಳು ಆದರೂ R ಮತ್ತು Hನ ಪಕ್ಷಗಳು ಒಂದೇ ಅಲ್ಲ—ಆದರೆ ಮಿತ್ರಪಕ್ಷಗಳು. A ಉಪಗಣದಲ್ಲಿ – G ನ ಆಶೀರ್ವಾದದಿಂದ ಒಳಸಂಚು ನಡೆದು A ನ ಹಾರಿಸಿ B ಎಂಬುವನು ಮುಖ್ಯ ಮಂತ್ರಿಯಾಗ್ತಾನೆ. R ನ ಮತ್ತು ಅವನ ಪರಿವಾರಕ್ಕೆ ವನವಾಸ. H ಅವನಿಗೆ ಆಶ್ರಯ ಕೊಡ್ತಾನೆ. H–ನ ಸರ್ಕಾರದಲ್ಲಿ M ಎಂಬುವನೊಬ್ಬ ಮಂತ್ರಿ, ವನವಾಸಕ್ಕೆ ಬಂದ R ನ ಪರಿವಾರದ ಯೋಗಕ್ಷೇಮ ವನ್ನು M ನೋಡಿ ಕೊಳ್ಳುತ್ತಾನೆ. M–ಸದಾ Rನ ಬೆನ್ನು ಹಿಂದೇ ಇರುತ್ತಾನೆ. ಪುನಹ – A ಗಣಕ್ಕೆ Rನೇ ಮುಖ್ಯ ಮಂತ್ರಿಯಾಗ್ತಾನೆ. ಈಗ M ನನ್ನೂ R ನೆನೆಸ ಬೇಕೋ ಬೇಡವೋ ?.

"ನೆನಸಬೇಕು "

"ಉಪಕಾರಕ್ಕೆ ಪ್ರತಿ ಉಪಕಾರ ಮಾಡಬೇಕೋ ಬೇಡವೋ ?

"ಅಲ್ಲಯ್ಯಾ – ಪಠ್ಯ ಪುಸ್ತಕಕ್ಕೂ ಗಿನಿ ಪಿಗ್ಸ್‌ಗೂ – ನಿನ್ನ ಈ ರಾಮಾಯಣಕ್ಕೂ ಏನಯ್ಯಾ ಸಂಬಂಧ ?"

"ಇದೆ ಆತುರ ಬೇಡ ರಂಗಣ್ಣ. ಇದು ಒಂದು ರೀತಿಯ ಡಿಡೆಕ್ಟಿವ್ ಲಾಜಿಕ್ ಫಲಿತಾಂಶ ಕೊನೆಗೆ"

"................"

"ಪುನಹ ಚುನಾವಣೆ ನಡೆಯುತ್ತದೆ – A ಗಣಕ್ಕೆ Rನೇ ಮುಖ್ಯ ಮಂತ್ರಿ— K ಗಣಕ್ಕೆ Hನೇ ಮುಖ ಮಂತ್ರಿಯಾಗ್ತಾರೆ—N ಮಹಾ ಗಣಕ್ಕೆ Gನೇ ಪ್ರಧಾನಿ. –ಏನ್ಮಾಡ್ತಾನೆ ಗೊತ್ತಾ? ತನ್ನ ಮಂತ್ರಿ ಮಂಡಲಕ್ಕೆ M ನ ತೆಗೆದುಕೊಳ್ಳೋದಿಲ್ಲ, ಆಗ M– ಏನ್ಮಾಡ್ತಾನೆ ?"

"R–ಹತ್ತಿರ ಹೋಗ್ತಾನೆ"

"ಗುಡ್ R ಏನ್ಮಾಡ್ತಾನೆ?"

H ಮೇಲೆ ಪ್ರಭಾವ ಬೀರಿ M ನ ಮಂತ್ರಿ ಮಾಡ್ತಾನೆ"

"ವೆರಿಗುಡ್ ಪಾಯಿಂಟಿಗೆ ಬರ್ತಾ ಇದೀಯ. ಈಗ M ಬೇಡಾದವನು, ಸಾಕಷ್ಟು ವಿರೋಧ ಇದೆ, ಆದರೆ R ನ ಪ್ರಭಾವ ಜೋರಾಗಿವೆ. ಸುಲಭವಾಗಿ M ನ ಹಾರಿಸುವುದು ಕಷ್ಟ. ಅವನನ್ನು ಅವನ ಹಗ್ಗದಿಂದಲೇ ಅವನೇ ನೇಣು ಹಾಕಿಕೊಳ್ಳುವಂತೆ ಮಾಡಬೇಕು, ಏನಂತೀ ?"

"ಕರೆಕ್ಟ್"

"ಇದು ಒಂದು ಪ್ರಯೋಗ"

"M ನ ವಿರೋಧಿಗಳು, ಅವನ ಪರಿವಾರ ಸೇರ್ತಾರೆ. ಅವನ ನಂಬಿಕೆ ಗಳಿಸ್ತಾರೆ, ಪಠ್ಯಪುಸ್ತಕನ ಉಚಿತ ಹಂಚಿಕೆ—ಉಚಿತ ಸಮವಸ್ತ್ರ ಹಂಚಿಕೆ etc. etc. ಪ್ರಯೋಗಗಳನ್ನು ಜಾರಿಗೆ ತರ್ತಾರೆ"

"ಇದರಿಂದ M ಗೇ ಒಳ್ಳೆಯದಾಗತ್ತಲ್ಲಯ್ಯಾ"

"ಒಳ್ಳೆಯದೊ–ಕೆಟ್ಟದೋ–ಇದೂ ಒಂದು ಪ್ರಯೋಗ ಏನಂತಿ?"

"ಪ್ರಯೋಗಾನೇ"

"M ನಿಂದಲೇ ಪತ್ರಿಕೆಗಳಿಗೆ ಹೇಳಿಕೆ ಕೊಡಿಸ್ತಾರೆ. ಪುಸ್ತಕವಿಲ್ಲದವರಿಗೆ ಪುಸ್ತಕ–ಬಟ್ಟೆ ಇಲ್ಲದವರಿಗೆ ಬಟ್ಟೆ–ಊಟ ಇಲ್ಲದವರಿಗೆ ಊಟ–ಶಾಲೆ ಇಲ್ಲದವರಿಗೆ ಶಾಲೆ–ಇತ್ಯಾದಿ ಇತ್ಯಾದಿ"

"ಸರಿ M ತುಂಬಾ ಜನಪ್ರಿಯನಾಗ್ತಾನೆ. ಮುಖ್ಯ ಮಂತ್ರಿಯಾಗುವ ಕನಸು ಕಾಣ್ತಾನೆ'

"ಈಕಡೆ ಬುದ್ಧಿ ಜೀವಿಗಳು ಸರ್ಕಾರ ಸಂಪನ್ಮೂಲ ಯೋಜನೆಗಳನ್ನು ಉತ್ಪಾದಕ ಯೋಜನೆಗಳನ್ನು ಕೈಬಿಟ್ಟಿದೆ. ಜನಗಳನ್ನು ಸ್ವಾವಲಂಬಿಗಳನ್ನಾಗಿ ಮಾಡದೆ ಸೋಮಾರಿಗಳನ್ನಾಗಿ ಮಾಡ್ತಾ ಇದೆ ಎಂದು ಬೊಬ್ಬೆ ಹಾಕ್ತಾರೆ.

"ಅವರದು ಯಾವಾಗಲೂ ಇದ್ದದ್ದೆ"

"N ಮಹಾ ಗಣದ ಪ್ರಧಾನಿ, G ಇದನ್ನೆಲ್ಲಾ ಗಮನಿಸುತ್ತಾನೆ. ಏನ್ಮಾಡ್ತಾನೆ–ಉಪಗಣಗಳು ಅನುತ್ಪಾದಕ ಯೋಜನೆಗಳನ್ನು ಇತಿಮಿತಿ ಇಲ್ಲದೆ ಹೆಮ್ಮಿಕೊಂಡರೆ–ಗ್ರ್ಯಾಂಟೇ ಕಟ್‌ಮಾಡ್ತೇನೆ. O.D. ನಿಲ್ಲಿಸುತ್ತೇನೆ ಎಂದು ಹೆದಸುತ್ತಾನೆ

—ಹೂಂ—"

"ಅಷ್ಟರಲ್ಲಿ ಈ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ವಿಳಂಬವಾಗುತ್ತದೆ. ಮುದ್ರಕರಿಗೆ ಹಣ ಸಂದಾಯವಾಗದೆ. ಪುಸ್ತಕ ಸಕಾಲಕ್ಕೆ ಸರಿಯಾಗಿ ಬರುವುದಿಲ್ಲ. ಪೇಪರ್ ಸಿಗುವುದಿಲ್ಲ. ಪುಸ್ತಕಗಳ ಹಂಚಿಕೆ ಯಡವಟ್ಟಾಗುತ್ತದೆ. ಅಂಗಡಿಗಳಲ್ಲಿ ಪುಸ್ತಕ ಇಲ್ಲ. ಹುಡುಗರಿಗೆ ಪುಸ್ತಕ ಇಲ್ಲ, ಗಲಾಟೆ–ಮುಷ್ಕರ, ಬಂದ್–ಗಲಾಟೆ – ಪ್ರಶಾಂತ-ಗೋಳೀಬಾರು – ಅಲ್ಲೋಲಕಲ್ಲೋಲವಾಗುತ್ತದೆ. ಮುದ್ರಕರು M ನನ್ನು ಹಣಕ್ಕೆ ತಗರಾರು ಮಾಡ್ತಾರೆ ಪುಸ್ತಕ ವ್ಯಾಪಾರಿಗಳು ತಮಗೆ ನಷ್ಟ ಆದ್ದರಿಂದ ಗಲಾಟೆಗೆ ಕುಮ್ಮಕ್ ಕೊಡ್ತಾರೆ. ಮುಖ್ಯಮಂತ್ರಿ ಈಗ ತಲೆ ನೋವ್ ಈಗೇನ್‌ಮಾಡ್ತಾನೆ!"


"M ನನ್ನು ಕರೆಸಿ ತರಾಟೆಗೆ ತೆಗೆದುಕೊಳ್ಳುತ್ತಾನೆ"

"ಇಲ್ಲಾ H ಏನೂ ಮಾಡುವುದಿಲ್ಲ, ಸುಮ್ಮನೆ ನೊಡ್ತಾಇರ್‍ತಾನೆ"

"ಈಗ Mಗೆ ಎಲ್ಲಾ ಕಡೆಯಿಂದಲೂ ಸಮಸ್ಯೆಗಳು ಸುತ್ತು ವರೆಯುತ್ತವೆ· "ಎಲ್ಲಾ ಗೋಜಲು-ಗೋಜಲು. ತಾನೇ ಮಾಡಿಕೊಂಡ ಬಲೆಯಲ್ಲಿ ಸಿಕ್ಕಿಬೀಳುತ್ತಾನೆ, ಈ ಸಿಕ್ಕಿನಲ್ಲಿ ಸಿಕ್ಕಿಹಾಕಿಕೊಳ್ಳೊರು ಯಾರು ? ಕೊನೆಗೆ ಅವನ ಗತಿ ಏನು ಇದನ್ನೇ Mಗೂ ವಿಸ್ತರಿಸಲು ಸಾಧ್ಯವೆ? ಅಂತಾ G ನೋಡ್ತಾನೆ.

"ಸರಿ ಅರ್ಥವಾಯಿತು ಬಿಡು"

"ಈಗ ಹೇಳು_ಪ್ರಯೋಗ ಯಾವುದು ? – ಯಾರುಗಿನಿಪಿಗ್ ?"



ಓಪನ್ ಗವರ್ನಮೆಂಟ್ ಅಂದಮೇಲೆ, ಟೇಬಲ್ ಮೇಲೆ ತಾನೇ ತೊಗೋಬೇಕು !

ಪಾಪಕೋಟಿಯ ಕತೆ

—ಚನ್ನಗಿರಿಸುಧೀಂದ್ರ

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ not a ದೇಶದಿ
ಇರುವ ಕೂಲಿಯು ದ್ಯಾವನೆಂಬನ
ಪರಿಭವದ ನಾ ಪೇಳ್ವೆನು

ಪುರದಗಲ್ಲಿಯ ಕೊಳಚೆಯಲ್ಲಿ
ಗರಿಯ ದೊಡ್ಡಿಯ ಮಾಡಿಕೊಂಡು
ನೆರಕೆ ಹಿತ್ತಿಲ ಗೊಟರಿನಲ್ಲಿ
ತರಕಾರಿಯ ಬೆಳೆ ತೆಗೆಯಲು

ಅಲ್ಲಿ ಇಲ್ಲಿ ಕಾಡಿಬೇಡಿ
ಸಲ್ಲಲಿತ ತರಕಾರಿ ಬೀಜವ
ನಿಲ್ಲದವನಾ ರೋಗಿ ಹೆಂಡತಿ
ಮೆಲ್ಲ ಮೆಲ್ಲನೆ ತಂದಳು

ಬೆವರ ಸುರಿಸಿ ದುಡಿಯುತಿರುವಾ
ದ್ಯಾವನಾ ಈ ಪರಿಯ ಕಂಡು
ಪಕ್ಕದಾ ಮನೆ ನಂಜನೆಂಬನು
ತಕ್ಕರಾರನು ತೆಗೆದನು

ತನ್ನದಲ್ಲದ ಹಿತ್ತಲಲ್ಲಿ
ದ್ಯಾವನೆನ್ನುವ ಬಡ್ಡಿ ಹೈದನು
ಅನ್ನೆಯದಿ ಬೀಜವನು ಬಿತ್ತಿದ
ಮನ್ನಿವುದೆ ನೀವೆನ್ನುತ

ಅರ್ಜಿಯನು ಬರೆದದನು ಬೇಗದಿ
ಗುರ್ಜರಾಯಿಸೆ ಕೂಡಲಾಗಲೆ
ಬಿಟ್ಟ ಬಾಣದ ವೇಗದಿಂದಲಿ
ನೊಟ್ಟಿಸೊಂದು ಬಂದಿತು

ಬೆದರಿ ಬೆಚ್ಚಿದ ದ್ಯಾವನೋಡಿದ
ಸದರಿ ಆಫೀಸ್ ಕ್ಲರ್ಕ ಕಂಡನು
ಹೆದರಿ ಹುಲ್ಲೆಯ ಮರಿಯು ಹೋಗಿ
ಕೆದೆರು ಹುಲಿಯನು ಕಾಂಬೊಲು

ಬಲ್ಲಿದನು ಆನಂಜನರ್ಜಿಗೆ
ಇಲ್ಲಿ ತಿಥಿಯನು ಮಾಳ್ಪೆನಾದೊಡೆ
ನಿಲ್ಲದೀಗಳೆ ನೂರು ರೂಪಾಯಿಯ
ಒಳ್ಳೆನೋಟನು ತಂದರೆ

ಪಟ್ಟೆ ಹುಲಿಯಾ ಕ್ಲಾರ್ಕ ಮಾತನು
ಕೆಟ್ಟೆನೆನ್ನುತ ದ್ಯಾವ ಕೇಳಿದ
ಕಣ್ಣಿನಿಂದಲೆ ನೋಡಿದಾ ಹಣ
ಬಣ್ಣವನೆ ನಾ ಕಾಣೆನು

ಹಿಡಿದರೋಷದಿ ಮೊರೆಯುತಾ ಹುಲಿ
ಘುಡು ಘುಡಿಸಿ ಘೋರಿಡುತ ಭರದಲ್ಲಿ
ಕೊಡುವೆಯೋ ನೀ ನಿಲ್ಲವೋ ಎನೆ
ನಡ ನಡುಗಿದನು ಆದ್ಯಾವನು

ಮೇಲೆ ಬಿದ್ದು ನಿನ್ನ ಹಿತ್ತಿಲ
ಹಾಳುಗೆಡೆ ಹುವೆ ನಂಜ ನರ್ಜಿಯ
ಬಾಳಿ ಬದುಕುವ ತೆರದೆ ಬರೆವೆನು
ಕೇಳ ಹುಲಿ ಇಂತೆನ್ನಲು

ಮನೆಗೆ ಬಂದಾ ಬಡವ ದ್ಯಾವನು
ಒನಕೆ ಹಾರೆ ದಬರಿಗಳನು
ಇನಿಯಳಾ ಹಳೆ ತಾಳಿಯನ್ನು
ಮನದಿ ಮರುಗದೆ ಮಾರಿದ


ಆಫಿಸೆಂಬುವ ಅಡವಿಯಲ್ಲಿ
ಫೈಲು ಬೆಟ್ಟದ ಗುಹೆಯೊಳಡಗಿದ
ಕ್ಲಾರ್ಕು ಹುಲಿಯನು ಕಂಡು ದ್ಯಾವನು
ಶರಣು ಹೊಡೆದನು ವಿನಯದಿ

ಐದು ಇದೆ ಇಪ್ಪತ್ತು ಇದೆ ಕೋ
ಬೈದ ಹೆಂಡತಿ ತಾಳಿಮಾರಿ
ಗೈದ ಪಾಪದಿ ಮಿಡುಕುತಿರುವೆನು
ಜೈ ದಬಾಯಿಸು ಜೇಬಿಗೆ

ಎನ್ನ ಒಡ ಹುಟ್ಟಣ್ಣ ನೀನು
ನಿನ್ನ ಸುಲಿದೇ ಸುಖವ ಪಡೆವೆನು
ಎನ್ನುತ್ತಾ ನೋಟುಗಳು ಕ್ಲಾರ್ಕನು
ತನ್ನ ಜೇಬಿಗೆ ತುರಕಿದ

ದೇವ ನಿರುವನು ದ್ಯಾವಕೇಳು
ಆ ವಿಗಡ ಮಹ ಸ್ವರ್ಗದಲ್ಲಿ
ಈವ ನನಗೆ ಹೊತ್ತು ಹೊತ್ತಿಗೆ
ತೀವ ಕುಡಿಯುವ ಹೆಂಡಕೆ

ಸತ್ಯಕೇ ಜಯವೆಂದು ನಂಬಿದ
ಪಾಪ ಕೋಟಿಯ ಕತೆಯಿದು



ಶನಿವಾರ ಬಂತೂಂದ್ರೆ, ಇವ್ರು ಈ ತರಾನೇ ಮಲಗೋದು !

ಅಭ್ಯಾಸ ಬಲ !

ಭಯೋತ್ಪಾದಕರು

—ಸ್ವಲ್ಪಬುದ್ಧಿ

ಭಯೋತ್ಪಾದನೆ ಇಂದು ಜಗತ್ತಿನ ಪ್ರಮುಖ ಸಮಸ್ಯೆಗಳಲ್ಲೊಂದಾಗಿದೆ. ಯಾವುದು ಆಗಬಾರದೋ ಅದು ಆಗುತ್ತಲೇ ಇದೆ : ಹೋಗುತ್ತಿಲ್ಲ.

ದಂಡವಿಲ್ಲದೆ ಯಾರೂ ತಲೆಬಾಗುವುದಿಲ್ಲ ಎಂದು ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ಹೇಳಿಲ್ಲವೇ ? ಒಬ್ಬ ಶಾಲಾ ಮಾಸ್ತರು ತಾಪತ್ರಯದಲ್ಲಿ ಬೆಂದು ಐದು ರೂಪಾಯಿಗಳಿಗೆಂದು ಊರಲ್ಲೆಲ್ಲಾ ಸೆರಗೊಡ್ಡಿ ಬೇಡಿದರೂ ದಕ್ಕುವುದಿಲ್ಲ. ಆದರೆ ಲಾಠಿ ಹಿಡಿದ ಪೋಲೀಸಪ್ಪ ಒಮ್ಮೆ ಹಳ್ಳಿಯಲ್ಲೆಲ್ಲಾ ಸುಮ್ಮನೆ ತಿರುಗಾಡಿದರೆ ಸಾಕು. ಜೇಬು ತುಂಬುತ್ತದೆ. ಕೈಯಲ್ಲಿ ಚೈನು, ಬ್ಲೇಡು ಹಿಡಿದ ರೌಡಿಯ ಅಧಿಕೃತ ಸಂಪಾದನೆ ಅವನೇ ಬಲ್ಲ. ಆರು ಲಕ್ಷ ಕಡೇ ಹಾಳೆಯ ಬಾಕಿ ವಸೂಲಿಗೆ ಒಂದು ಲಕ್ಷ ಫೀಸೆ ಅಂತ ಆಲದ ಮರದ ಪೊಟರೆಯ ಗೂಗೆಗಳು ಮಾತಾಡಿಕೊಂಡುವು ಎಂದು ಮರಗಿಡಗಳು ಪಿಸುಗುಟ್ಟುತ್ತವೆಯಂತೆ. ಅದ ಮೇಲೆ ನಿಕರಾಗುವಾಲೆಬನಾನ್, ಇರಾನ್, ಟೊರಾಂಟೊ, ಆಫ್ಘಾನಿಸ್ಥಾನ, ಹಂಗೇರಿಗಳಲ್ಲಿ ಏನೋ ಎಂತೋ ? ಮಾಂಟ್ರಿಯಲ್ ಅಂಕಿಸಂಖ್ಯೆಗಳೂ ತಿಳಿದಿಲ್ಲವಂತೆ.

ಎಂದಮೇಲೆ ಜಗತ್ತಿನ ಅತ್ಯಂತ ಪುರಾತನ ಕಾಲದ ನಾಗರೀಕತೆಯಾದ ಭಾರತದಲ್ಲಿ ಬಾಹ್ಯಾಕಾಶಯಾನ, ಪರಮಾಣುಕಲ್ಪನೆಗಳಂತೆ ಭಯೋತ್ಪಾದನೆಯೂ ಇದ್ದಿರಲೇಬೇಕಲ್ಲವೆ ?

ಶೂರ್ಪನಖಿ ಭಗ್ನಪ್ರೇಮಿಯಾದ ಮೇಲೆ ಭಯೋತ್ಪಾದಕಿಯಾದ ಸುದ್ದಿ ರಾಮಾಯಣ ಓದುವವರಿಗೆಲ್ಲಾ ಗೊತ್ತಿದೆ. "ಡಿಯರ್ ಬ್ರದರ್, **the most prettiest dish in the world. Worth a billion billion pounds sterling'** ಎಂತೊಡನೆ ತ್ರಿಭುವನ ವೀರನಾದ ರಾವಣ ಭಯಕ್ಕೊಳಗಾದ. ಹನುಮಂತ ಅಶೋಕ ವನವನ್ನು ಮುರಿದು ಲಂಕೆಗೆ ಬೆಂಕಿಹಚ್ಚಿ **made good his escape**

ವಿಷ್ಣು ತ್ರಿಪುರಗಳಲ್ಲಿ ಟೂರಿಂಗ್ ಟಾಕೀಸ್ ಓಪನ್ ಮಾಡಿ, ತ್ರಿಪುರಗಳ ಸ್ತ್ರೀಯರಿಗೆ ಫಾ ಷನ್ ಕ್ರೇಜ್ ತಂದು, ತ್ರಿಪುರಗಳ ನಾಶಕ್ಕೆ ಕಾರಣವಾದ ವಿಡಿಯೋ ಪಾರ್ಲರ್ ತಗೆದ ಅಂತಲೂ ಸುದ್ದಿ.

ಬ್ರಹ್ಮಾದಿ ದೇವತೆಗಳೇ ಬ್ರಹ್ಮರ್ಷಿ ಎಂದು ಸರ್ಟಿಫಿಕೇಟ್ ಇಷ್ಯು ಮಾಡಿದರೂ ವಿಶ್ವಾಮಿತ್ರನಿಗೆ, ವಸಿಷ್ಠನ ಕ್ಯಾರೆಕ್ಟರ್ ಸರ್ಟಿಫಿಕೇಟ್ ದೊರೆಯಲಿಲ್ಲ.. ಆಗ ವಿಶ್ವಾಮಿತ್ರ ದೊಡ್ಡದೊಂದು ದುಂಡಿಯನ್ನು ಹಿಡಿದೇ ಬೇವಿನ ಮರವನ್ನೇರಿದ— ಕೆಳಗೆ ಮಲಗಿದ್ದ ವಸಿಷ್ಠನ ತಲೆಯ ಮೇಲೆ ಕಲ್ಲನ್ನೆತ್ತಿ ಹಾಕಲು

ಇದಕ್ಕೆಲ್ಲಾ ನೀವೇನೆನ್ನುತ್ತೀರಿ ? ನೀನು ನಿಯೋಗ ಗಿಯೋಗ ಅಂತ ಏನೇ ನನ್ನೋ ಕಾದಂಬರಿಗಳಲ್ಲಿ ಓದಿ. ಪುರಾಣದ ಕಥೆ ಕಿವುಚುತ್ತಿರುವೆ ಭಾರತ ಶಾಂತಿ, ಜ್ಞಾನ, ವೈರಾಗ ಗಳ ಬೀಡು : ಭವ್ಯ ಸಂಸ್ಕೃತಿಯ ಉಗಮ ಸ್ಥಾನ. ಕಂತ್ರಿ ಮ್ಲೇಚ್ಛ ಸಂಸ್ಕೃತಿಗಳಲ್ಲ, ಸನಾತನ ಸಂಸ್ಕೃತಿ, **mind your tongue** ಎಂದೋ ವಿಲಾಯಿತಿ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಅಪರಾಧಗಳ ಸಂಖ್ಯೆ ಬಲು ಕಡಿಮೆ ಎನ್ನುವುದು ನಿಜ. ಆದರೆ ಸತ್ಯ, ಶಾಂತಿ. ಅಹಿಂಸೆಗಳ ಉಗಮ ಸ್ಥಾನವಾದ ನಮ್ಮ ಸುತ್ತಲೂ ಎಷ್ಟು ಜನ ಭಯೋತ್ಪಾದಕರಿದ್ದಾರೆ. ಯಾವ ಕಾನೂನು ಅವರನ್ನೇನು ಮಾಡಬಲ್ಲದು ?

ಮೊದಲ ಭಯೋತ್ಪಾದಕರು ನೆರೆಹೊರೆಯವರು. ಅವರು ನೀವು ತಂದ ತರಕಾರಿ ಅಥವಾ ಅಕ್ಕಿ ಬೇಳೆ ಮೊದಲಾದ ಕಿರಾಣಿ ಸಾಮಾನುಗಳನ್ನು ನಿಮಗಿಂತಾ ಏಕ್‌ದಂ ಕಡಿಮೆ ಬೆಲೆಗೆ ತಂದಿರುತ್ತಾರೆ, ಅಲ್ಲದೆ ರೇಟು ಏರುವ ಮೊದಲೇ ಕಾಯಿ. ಹುಣಸೇಹಣ್ಣು ಸಕ್ಕರೆ ಸೀಮೆಎಣ್ಣೆಗಳನ್ನು ದಾಸ್ತಾನು ಮಾಡುತ್ತಾರೆ. ಅಥವಾ ಹಾಗೆಂದು ಹೇಳಿಕೊಂಡು ಓಡಾಡುತ್ತಾರೆ. ಇಲ್ಲವೆ ಟು–ಇನ್–ಒನ್ ಆಲ್ಮೇರಾ, ಚೈನೀಸ್ ಸಿಲ್ಕ್ ಸೀರೆ, ಕಾಸೆಟ್‌ಗಳಿಗೆ ಆರ್ಡರ್ ಕೊಟ್ಟಿರುವುದಾಗಿ ಹೇಳುತ್ತಾರೆ. ಮೊಪಡ್ ಲಕ್ಕಿ ಚೀಟಿ ಮೆಂಬರಾಗಿರುತ್ತಾರೆ· ನಮಗೋ ನಮ್ಮ ಬಾಳೆಲ್ಲ ತಿಂಗಳ ಅಗತ್ಯಗಳನ್ನೇ ಬರಿಸಲಾಗದೆ ಹಾಳು ಸುರಿದಂತೆನಿಸಿ ಭಯೋತ್ಪಾದನೆ ಆಗುತ್ತದೆ· ಅಲ್ಲದೆ ಅವರು ಚದರಕ್ಕೆ ನಾನೂರು ರೂಪಾಯಿ ರೇಟಿರುವಾಗಲೇ ಆರ್‌ಸಿಸಿ ಮನೆ ಕಟ್ಟಿಸಿದ್ದಾರೆ. ಈಗ ಅದರ ರೇಟು ಐದು ಸಾವಿರವಿದ್ದು ಶೀಘ್ರ ದಲ್ಲೇ ಎಂಟು ಸಾವಿರವಾಗುತ್ತದೆ ಎಂದು ಬೆದರಿಸುತ್ತಾರೆ. ಅವರು ಐವತ್ತೇ ರೂಗೆ ಸೈಟ್ ಕೊಂಡರಂತೆ.

ರಾಮನವಮಿ, ಗಣೇಶೋತ್ಸವ ರಸ್ತೆ ರೋಕೋ, ಬಸವಜಯಂತಿ, ಜೀರ್ಣೋದ್ಧಾರಗಳಪಟ್ಟುಹಿಡಿದು ಝಳೇಪಿಸುವ ಭಯೋತ್ಪಾದಕರಾದರೋ ನಿತ್ಯ ಪೀಡೆಗಳು. ಅಪಘಾತ : ರಸ್ತೆ, ರೈಲು, ವಿಮಾನ, ಹಡಗುಗಳೆಲ್ಲದರ ಬಾಬ್ತು

ನಿತ್ಯ ಸರ್ಕಾರ ಉರುಳಿಸುವ ಆಶ್ವಾಸನೆಗಳು. ಲಂಚವಿದ್ದರೆ ಬರೀ ಮಂಚವೇ ಏಕೆ. ಅಪಾಯಿಂಟ್‌ಮೆಂಟ್, ಟ್ರಾನ್ಸ್‌ಫರ್, ಬಡ್ತಿ, ಲೈಸನ್ಸ್, ಪರ್ಮಿಟ್, ಅದರ ಅನಧಿಕೃತ ದರಗಳು ದಿನದಿನಕ್ಕೂ ಏರುತ್ತಿವೆಯಂತೆ [ಮತ್ತೇನು ಬೇಕು ?

ನಾನು ಹೇಳಿದಂತೆ ಕೇಳು, ಇಲ್ಲದಿದ್ದರೆ ಯಾವಾಗ ಹೇಗೆ ಎಲ್ಲಿ ನಿನ್ನ ಹೆಗಲ ಮುರಿಸುತ್ತೇನೆ ಎಂಬುದನ್ನೂ ನೋಡುತ್ತೀಯೆ ಎನ್ನುವ ಸಹೋದ್ಯೋಗಿಗಳು ! ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿ ಎಲೆಕ್ಷನ್‌ಗಳು ?

ಮೊನ್ನೆ ನಮ್ಮ ಮನೆ ಮುಂದೆ ಮೋಟರ್‌ಬೈಕಿನ ಮೇಲೆ ಹೋದ ಇಬ್ಬರು ಗಡ್ಡಧಾರಿಗಳು, ಇಬ್ಬರು ಮುಖ ತಲೆ ಬೋಳಿಸಿದವರು. ತಮ್ಮ ವಾಹನಗಳನ್ನು ನನ್ನ ಮಿತ್ರ ಅಲ್ಪಬುದ್ಧಿಯ ಮನೆಯ ಮುಂದೇ ನಿಲ್ಲಿಸಿದರು. ಅಂದು ಬೆಳಗಿನ ಜಾವ, ಅವರ ಮನೆಯೊಳಗಿನಿಂದ ಅರಬರಂತೆ ಬೆಡ್‌ಷೀಟ್ ತಲೆಗೆ ಸುತ್ತಿಪ ಇಬ್ಬರು ಹೊರಬಿದ್ದರು.

ಆಗ ಹ್ಯಾಮ್ಲೆಟ್‌ನಂತೆ ನನ್ನ ಮನಸ್ಸು ದ್ವಂದ್ವಪೀಡಿತವಾಯ್ತು, ಈ ಚಟು ವಟಿಕೆಗಳನ್ನು ಪೋಲೀಸರಿಗೆ ತಿಳಿಸಲೇ ಬೇಡವೇ ? ಮೋಟಾರ್ ಬೈಕಿನವರೋ, ತಲೆಮುಸುಕಿನವರೋ ಕೈ ಅಥವಾ ಟ್ರಾನ್ಸಿಸ್ಟರ್ ಬಾಂಬುಗಳನ್ನು ಏಕೆ ತಂದು ಅಲ್ಪ ಬುದ್ಧಿಗೆ ಕೊಟ್ಟಿರಬಾರದು? ಆದರೆ ನನಗಿದ್ದ ಸಾಕ್ಷ್ಯಗಳಾದರೂ ಏನು? ಮೋಟಾರ್ ಬೈಕಿನ ಮೇಲೆ ಕುಳಿತವರು ಬುದ್ಧಿಜೀವಿಗಳಾಗಿ ಏಕೆ ಗಡ್ಡ ಬಿಟ್ಟಿರಬಾರದು ? ತಲೆಗೆ ಮುಸುಕು ಹಾಕಿದವರಿಗೆ ಮಧ್ಯಪ್ರಾಚ್ಯದ ಸಂಪರ್ಕ ಇರುವುದು ಕಡ್ಡಾಯವೇ ? ಡೋಲಾಯಮಾನವಾದ ಮನಸಿನಿಂದ ಆ ಹಗಲನ್ನು ಕಳೆಯುವುದು ಅಸಹನೀಯ ವಾಯಿತು.

ಮಧ್ಯಾಹ್ನ ಕಳೆಯಲೋ ಬೇಡವೊ ಎನ್ನುತ್ತಿತ್ತು. ಅಂದರೆ ವೇಳೆ ಹನ್ನೆರಡು ಗಂಟೆ ನಲವತ್ತು ಸೆಕೆಂಡುಗಳಾಗಲಿವೆ. ಬೈ ದಿ ಬೈ ಈ ವಾಕ್ಯ ಸರಿಯೋ ತಪ್ಪೋ ಎಂಬ ಭಯವೂ ಈಗ ಸೇರಿಕೊಳ್ಳುತ್ತಿದೆ. ವೇಳೆ ಹನ್ನೆರಡು ಗಂಟೆಗೆ ನಲವತ್ತು ಸೆಕೆಂಡುಗಳು ಎಂದರೆ ಸಾಕಾಗುತ್ತಿತ್ತೋ ಏನೊ ? ವೇಳೆ ಆಗುತ್ತದೆಯೋ, ಸೆಕೆಂಡು ಗಳಾಗುತ್ತವೆಯೋ ಅನೌನ್ಸರನೇ ಬಲ್ಲ. ಅಥವಾ ಅನೌನ್ಸರರೇ ಬಲ್ಲನು. ಅಥವಾ ಅನೌನ್ಸರನೇ ಬಲ್ಲರು. ಅಲ್ಪಬುದ್ಧಿ ನಿರ್ಭೀತಿಯಿಂದ ಬಂದು ನನ್ನೆದೆ ಯನ್ನು ತೋರು ಬೆರಳಿನಿಂದ ಚುಚ್ಚಿ.

"ನಿನಗೊಂದು ಸತ್ಕಾರಸಮಾರಂಭ ಮಾಡುತ್ತೇವೆ" ಎಂದ (ಅಥವಾ ಎಂದರು) "ಏ ಏ ಕೆ" ನಾನು ಭಯದಿಂದ ತೊದಲಿದೆ.

"ನಿನ್ನಂ ಮಹೀತಳದೊಳೆ ಮೆರೆದೆಗೆವು ಸ್ವಲ್ಪ ಬುದ್ಧೀ"

"ನನ್ನಷ್ಟಕ್ಕೆ ನನ್ನನ್ನು ಬಿಡು ಅಲ್ಪೂ

"ಸಾಧ್ಯವೇ ಇಲ್ಲ---ನಿನಗೆ ನಲವತ್ತೊಂಬತ್ತು ವರ್ಷ (ದಂಡಕ್ಕೆ) ಆದದ್ದಕ್ಕೋ ಇದುವರೆಗೂ ಎರಡು ಬಾರಿ ಹಿಂಬಡ್ತಿ ಆದದ್ದಕ್ಕೋ, ನಾಲ್ಕು ವರ್ಷ ಹತ್ತು ತಿಂಗಳಿಗೆ ಅಕ್ಷರ ಕಲಿಯಲಾರಂಭಿಸಿದ್ದಕ್ಕೊ ನಷ್ಟವಾಗುವ ಸಾಹಿತ್ಯವನ್ನು ಸೃಷ್ಟಿ ಸಿದ್ಧಕ್ಕೊ ಅಂತು ಏತಕ್ಕೋ ಏನೋ ನಿನಗೆ ಸತ್ಕಾರ ಮಾಡಲೇಬೇಕು. ರೆಡಿ ಯಾಗಿರು:

ತಿರಸ್ಕಾರದಿಂದ ನನ್ನತ್ತ ನೋಡುತ್ತ ಅಲ್ಪಬುದ್ದಿ ನಡೆದೇಬಿಟ್ಟ. ಅವನ ಮೋಟೀವ್ಸ್ ಕ್ರಿಯೆಯ ಪರಿಣಾಮುಗಳನ್ನು ನೆನೆದು ನನಗೆ...ಭ ಯ ವಾಗುತ್ತಿವೆ ಅಥವಾ ಭಯಗಳಾಗುತ್ತಿದೆ.

ವಿದ್ಯೆ

—ವಿ. ಜಿ. ಭಟ್ಟ

ಪಡೆದು ಬಂದನು ಆತ ವಿಶ್ವವಿದ್ಯಾಲಯದ
ಸ್ನಾತಕೋತ್ತರ ಪದವಿ, ಸರ್ಟಿಫಿಕೇಟು
ಬರುವಾಗಲೇ ಭಧ್ರವಾಗಿ ಜಡಿದನು ಜಗ್ಗಿ
ಜ್ಞಾನಮಂದಿರದೆಲ್ಲಾ ಬಾಗಿಲೂ ಗೇಟು.

ದಾರಿಯಲಿ ತೋರಿಸಿದ ತನ್ನ ಭಾಗ್ಯದ ರೇಖೆ
ಬೀದಿಯಂಚಿನ ಹಸ್ತ ಸಾಮುದ್ರಿಕಂಗೆ
ಉಜ್ವಲ ಭವಿಷ್ಯವನು ತಿಳಿದು ಬಲು ಹಿಗ್ಗಿದನು
ಬಂತು ಆತನ ಮುಖಕೆ ಹೊಸತು ರಂಗೇ

ಉಟೋಪಿಯಾ

ಈ ದೇಶದಿ ಬಹು ಸಂಖ್ಯಾತರಿಗೂ
ಹಾಕಬಲ್ಲವನು ಟೋಪಿಯಾ
ಮಂದಿಯ ದೃಷ್ಟಿಗೆ ಆತನ ಕುಶಲತೆ
ಚತುರತೆ ಸಾಹಸ ಉಟೋಪಿಯಾ

ಜನರಿಗೆಲ್ಲಿಹುದು ಹದಾ ಹಾಕುವಾ
ಶಕ್ತಿಯು ಅಂಥಾ ಉಡಾಪಿಯಾ?
ಸುಮ್ಮ ನೇತಕೋ ನಿಂತಿಹನಲ್ಲಾ
ಶ್ರೀ ಕೃಷ್ಣ ಹರಿ ಉಟೋಪಿಯಾ

ದುಭಾಷಿಯ ಟೀವಿ

—ಕಿಟ್ಟು

ಈಚೆಗೆ ನಮ್ಮೂರಿನ ಸಮೀಪದಲ್ಲಿ ಟೀವಿ ರಿಲೇ ಸ್ಟೇಷನ್ ಶುರುವಾದ ನಂತರ ನಮ್ಮ ಮನೆಯಾಕೆ ಟೀವಿ ಕೊಳ್ಳಲು ನನಗೆ ಆಗ್ರಹ ಮಾಡುತ್ತಿದ್ದಳು. ನಾನು ಏನೇನೋ ನೆಪ ಹೇಳಿ ಮುಂದೆ ಹಾಕುತ್ತಾ ಬಂದಿದ್ದೆ, ಕೇಂದ್ರದ ಬಜೆಟ್ ನಂತರ ಆಕೆಯ ಒತ್ತಾಯ ಜಾಸ್ತಿಯಾಯಿತು. ಲೈಸನ್ಸ್ ರಗಳೆ ಇಲ್ಲ. ಈಗಲಾದರೂ ಟೀವಿ ತೆಗೆದುಕೊಳ್ಳಿ ಎಂದು ಪೀಡಿಸಲಾರಂಭಿಸಿದಳು. ಟೀವಿಯ ಬಳಕೆಯಿಂದ ಆಗುವ ಅನಾಹುತಗಳನ್ನು ಅವಳಿಗೆ ತಿಳಿಸಲು ಪ್ರಯತ್ನಿಸಿದೆ. 'ಮನೆಗೆ ಟೀವಿ ಬಂದರೆ ಮಕ್ಕಳು ಓದುವುದೇ ಇಲ್ಲ' ಎಂದೆ. "ಈಗೆಲ್ಲಿ ಓದುತ್ತಿದ್ದಾವೆ" ಎಂದು ಕೇಳಿದಳು. "ನೆರೆಹೊರೆಯವರೆಲ್ಲಾ ಮನೆಗೆ ದಾಳಿ ಇಡುತ್ತಾರೆ" ಎಂದ, ಅವರೆಲ್ಲಾ ಟೀವಿ ಕೊಂಡಾಗಿದೆ. ನೀವೊಬ್ರೇ ಈ ಓಣಿಯಲ್ಲಿ ಟೀವಿ (ಠೀವಿ) ಇಲ್ಲ ಇಲ್ಲದೋರು" ಎಂದು ತಿವಿದಳು; ತಲೆ ಕೆರೆದುಕೊಂಡೆ. ಹೊಳೆಯಿತು "ಟೀವಿಯಿಂದ ಕಣ್ಣು ಹಾಳಾಗುತ್ತೆ ಕಣೆ" ಎಂದೆ. (ದುಡ್ಡು ಹಾಳಾಗುತ್ತದೆ ಎನ್ನಲು ಧೈರ್ಯ ಸಾಲಲಿಲ್ಲ) "ಹಾಗಿದ್ರೆ ನೀವು ನೋಡ್ಲೇ ಬೇಡಿ" ಎಂದಳು. ಇದೊಳ್ಳೆ ಗ್ರಹಚಾರ ವಾಯ್ತಲ್ಲಾ, ಯಾವ ಪ್ರಾಬ್ಲಮ್ ಹೇಳಿದರೂ ಕೂಡಲೇ ಇವಳ ಬಳಿ ಪರಿಹಾರ ಉಂಟೇ ಸೋನಿಯಾಗಾಂಧಿ ಯೇನಾದರೂ ಇವಳಷ್ಟು ಚುರುಕಿದ್ದರೆ ರಾಜೀವ್ ಗಾಂಧಿಯವರು ಎಲ್ಲ ಸಮಸ್ಯೆಗಳನ್ನೂ ಬಿಡಿಸಿಬಿಡುತ್ತಿದ್ದರೇನೋ ? ಕೊನೆಗೆ ಟ್ರಂಪ್‌ಕಾರ್ಡ್ ಎನ್ನುವಂತೆ. "ಇದು ಸಟ್‌ಲೈಟ್ ರಿಲೇ ಕಣೆ. ಕೇವಲ ದೆಹಲಿ ಪ್ರೋಗ್ರಾಂ ಮಾತ್ರ ಬರೋದು. ಬೆಂಗಳೂರು ಬರೋದಿಲ್ಲ. ಬರೀ ಹಿಂದಿ ಇಂಗ್ಲೀಷ್ ಕಾರ್ಯಕ್ರಮಗಳು, ಬೆಂಗಳೂರು ಸ್ಟೇಷನ್ ರಿಲೇ ಆಗುತ್ತೆ ಅನ್ನುವಾಗ ಕೊಂಡ್ಕೊಳ್ಳೋಣ" ಎಂದೆ. ಬೀಸುವ ದೊಣ್ಣೆ ತಪ್ಪಲಿ ಎಂದು. "ಅಷ್ಟೊತ್ತಿಗೆ ಇಬ್ಬರೂ ಮುದುಕರಾಗಿ ಕಣ್ಣು ಮಂಜಾಗಿರುತ್ತೆ ಎಂದು ಈಗಲೇ ಕಣ್ಣು ಮಂಜುಮಾಡಿಸಿಕೊಳ್ಳಲಾರಂಭಿಸಿದಾಗ ನಾನು ಕರಗಲೇ ಬೇಕಾಯ್ತು.

ಅಂತೂ ನಾನು ಟೀವಿ ತರಲು ಒಪ್ಪಿದಾಗ ನನ್ನಾಕೆಯ ಸಂತೋಷ ಹೇಳ ತೀರದು. ಮಕ್ಕಳು ಸ್ಕೂಲಿಂದ ಬಂದ ಕೂಡಲೇ ವಿಷಯ ತಿಳಿದು ಕುಣಿದಾಡಿದವು, ನೆರೆಮನೆಯವರೂ ಸುದ್ದಿ ಕೇಳಿ ನಮಗಿಂತ ಖುಷಿಪಟ್ಟರು. ನಮ್ಮ ಮಕ್ಕಳು ಅವರ ಮನೆಗೆ ದಾಳಿಮಾಡುವುದು ತಪ್ಪಿತಲ್ಲ ಎಂದು ಹೆಂಗಸರು ಖುಷಿ ಪಟ್ಟರೆ, "ನಮ್ಮಂತೆ ಇವನೂ ಗುಂಡಿಗೆ ಬಿದ್ದನಲ್ಲಾ ಎಂದು ಗಂಡಸರು ಖುಷಿಪಟ್ಟರು.

ಅಂತೂ ಒಂದು (ಅ) ಶುಭ ಮುಹೂರ್ತದಲ್ಲಿ ಟೀವಿ ಬಂದು ಮನೆಯಲ್ಲಿ ಪ್ರತಿಷ್ಠಾಪನೆಯಾಯಿತು. ಮಕ್ಕಳು ಆದಿನ ಶಾಲೆಗೆ ರಜ ಕೊಟ್ಟವು. ನಮ್ಮೂರು ಮಲೆನಾಡು, ಮಂಗಳೂರು ಹೆಂಚಿನ ಮನೆಗಳೇ ಎಲ್ಲಾ. ಹೆಂಚು ತೆಗೆದು ಆಂಟೆನಾ ಫಿಕ್ಸ್ ಮಾಡುವ ಗಲಾಟೆಯಲ್ಲಿ ನಾಲ್ಕು ಹೆಂಚು ಒಡೆದುಹೋದವು. ಹೆಂಚುಗಳ ಬಗ್ಗೆ ನಾನ್ರು ತಲೆ ಕೆಡಿಸಿಕೊಳ್ಳುತ್ತಿದ್ದಾಗ ಒಳಗೆ ಪರದೆಯ ಮೇಲೆ ಚಿತ್ರ ಮೂಡಿ ಬಂದದ್ದನ್ನು ನೋಡಿದ ಮಕ್ಕಳು ಉಳಿದ ಹೆಂಚುಗಳೂ ಹಾರಿಹೋಗುವ ಹಾಗೆ ಕಿರಿಚಿಕೊಂಡವು. ಆದರೆ ಆಕೃತಿಗಳು ಇಂಗ್ಲೀಷ್‌ನಲ್ಲಿ ಮಾತನಾಡತೊಡಗಿದಾಗ ನನ್ನ ಹೆಂಡತಿ ಮಕ್ಕಳು ಕಣ್‌ಕಣ್ ಬಿಟ್ಟರು.

(ನಾನು ಯಾವುದೋ ಕನ್ನಡ ಹೋರಾಟ ಸಮಿತಿಯಲ್ಲಿ ಇರಲಿಲ್ಲವಾದ್ದರಿಂದ ನನ್ನ ಮಕ್ಕಳು ಕನ್ನಡ ಸ್ಕೂಲಿನಲ್ಲೇ ಕಲಿಯುತ್ತಿದ್ದವು). ಭಾಷೆ ಅರ್ಥವಾಗಡೆ ಪಿಳಿಪಿಳಿ ನೋಡುತ್ತಿದ್ದವರನ್ನು ನೋಡಿ ನಾನು ಒಳಗೊಳಗೇ ಖುಷಿಪಟ್ಟೆ, "ಬೇಡಾಂದ್ರೂ ಕೇಳಿಲಿಲ್ಲ ಈಗ ಅನುಭವಿಸಿ ಎನ್ನುವಂತೆ, ಆದರೆ ಅನುಭವಿಸ ಬೇಕಾದವನು ನಾನೇ ಎನ್ನುವುದು ನನಗೆ ಕೂಡಲೇ ಮನವರಿಕೆಯಾಯಿತು. ಅಪ್ಪ ಅದೇನಪ್ಪ ಅವಳು ಹೇಳ್ತಿರೋದು ಅದೇನಪ್ಪಾ ಅವನು ತೋರಿಸ್ತಿರೋದು ?" ಎಂದು ಮಕ್ಕಳು ಪ್ರಶ್ನಿಸಲಾರಂಭಿಸಿದವು. ಜೋರುಮಾಡಿ ಸುಮ್ಮನಿರೋಣ ವೆಂದರೆ ಅವುಗಳ ಜೊತೆ ಇವಳೂ ಸೇರಿಕೊಂಟು ಪ್ರಶ್ನೆ ಹಾಕಲಾರಂಭಿಸಿದಳು ಈ ದುಬಾರಿ ದೂರದರ್ಶನ ಕೊಂಡಿದ್ದಲ್ಲದೆ ದುಭಾಷಿ ಬೇರೆ ಆಗಬೇಕಾಗಿ ಬಂದ ನನ್ನ ದುರವಸ್ಥೆ ನನ್ನ ದುಶ್ಮನ್‌ಗೂ ಬೇಡ.

ಈ ಭಾಷಾಂತರಕ್ಕಿಂತ ದೊಡ್ಡ ಗಂಡಾಂತರ ಹೊಸರುಚಿಯ ರೂಪದಲ್ಲಿ ಎದುರಾಯಿತು, ಟೀವಿಯಲ್ಲಿ ಹೊಸ ರುಚಿ ಬಂದರೆ, ಕನ್ನಡಕ್ಕೆ ಭಾಷಾಂತರಿಸಿ ಕೊಡುವುದಷ್ಟೇ ನನ್ನ ಕರ್ಮವಾಗಿದ್ದರೆ ಪರವಾಗಿರಲಿಲ್ಲ, ಆ ಹೊಸ ರುಚಿಗಳಿಗೆ ಮೊದಲ ಬಲಿ ಕೂಡಾ ನಾನೇ ಆಗುತ್ತಿದ್ದೆ. ಚೆನ್ನಾಗಿದೆ ಎಂದು ಹೇಳಿದರೆ ಮಾರನೇ ದಿನವೂ ಅದಕ್ಕೇ ಮಾಡುತ್ತಿದ್ದಳು ಚೆನ್ನಾದಿಲ್ಲವೆಂದರೆ ನೀವು ನೀವು ಭಾಷಾಂತರಿಸುವಾಗ ಎಲ್ಲೋ ತಪ್ಪಿರಬೇಕು" ಎಂಬ ಆಕ್ಷೇಪಣೆ ನನ್ನ ಮೇಲೆ ಬರುತ್ತಿತ್ತು.

ದೆಹಲಿಯ ಕಾರ್ಯಕ್ರಮಗಳು ಮಾತ್ರ ಟೀವಿಯಲ್ಲಿ ಈಗ ಬರುತ್ತಿರುವುದ ರಿಂದ ಸ್ವಲ್ಪಮಟ್ಟಿಗಾದರೂ ಬಚಾವಾಗಿದ್ದೇನೆ. ಏಕೆಂದರೆ ಹೆಚ್ಚಿನ ಹೊಸ ರುಚಿ ಗಳು ಉತ್ತರ ಭಾರತದ ಮಾದರಿಯಾಗಿದ್ದು ನನ್ನಾಕೆ ಅವುಗಳಲ್ಲಿ ಅಷ್ಟು ಆಸಕ್ತಿ ತೋರಿಸುತ್ತಿರಲಿಲ್ಲ. ಬೆಂಗಳೂರಿನ ಕಾರ್ಯಕ್ರಮಗಳು ಇನ್ನೂ. ಇಲ್ಲಿ ಪ್ರಸಾರ ವಾಗದಿರುವುದು ನನಗೆ ಒಳ್ಳೆಯದೇ ಆಗಿದೆ.

ಮುಖಾಮುಖಿ—೪

—ಅಪ್ರಸ್ತುತ

ಅಪರಂಜಿ ಗೌರಿ ಹಬ್ಬದ ಹೋಳಿಗೆ ಸಿಕ್ಕಾವೆಂದು ಪಕ್ಕದ ಹಳ್ಳಿಗೆ ಹೊರಟಿದ್ದಳು. ಸ್ವಲ್ಪ ಮೇಕಪ್ ಸರಿಮಾಡಿಕೊಳ್ಳುವಷ್ಟರಲ್ಲಿ ಹೊರಗೆ ಯಾರೋ ಪೀಪಿ ಊದಿದ ಸದ್ದು ಕೇಳಿಸಿತು. ಕೊರವಂಜಿ, ಮಗಳಿಗೆ "ನಿನ್ನ ಬಾಯ್ ಫ್ರೆಂಡ್ ಬಂದಿದ್ದಾನೆ" ಎಂದು ಸ್ವಲ್ಪ ಒಗಚಾಗಿ ಹೇಳಿದಳು. "ಅವನು ಫ್ರೆಂಡ್ ಅಲ್ಲ, ಸಹ ಚಿಂತಕ" ಎಂದು ಅಪರಂಜಿ ಸಮರ್ಥನೆ ಮಾಡಿಕೊಂಡಳು. ಪೀಪಿ ಊದುತ್ತಾ ಆ ಯುವಕ ಕೊರವಂಜಿಯ ಹಳೆ ಗುಡಿಸಿಲೊಳಕ್ಕೇ ಬಂದ, ಅಪರಂಜಿಗೆ ಒಂದು ಛಾಲೆಂಜ್ ಹಾಕಿದ "ನಿನ್ನ ಕಣಿ ಹೇಳುವ ಸಾಮರ್ಥ್ಯಕ್ಕೊಂದು ಸವಾಲು, ನನ್ನ ಮನಸ್ಸಿನಲ್ಲಿ ಎರಡು ಪ್ರಶ್ನೆಗಳಿವೆ ಅವೇನು ಹೇಳು.

ಅಪರಂಜಿ ನಕ್ಕು "ಅದಕ್ಕೇನು ಕಣಿ ಹೇಳಬೇಕಾಗಿಲ್ಲ, ಕಾಮನ್‌ಸೆನ್ಸೇ ಸಾಕು. ಅವಕ್ಕೆ ಉತ್ತರವೂ ಅಷ್ಟೇ ಸ್ವಯಂಸಿದ್ಧ" ಎಂದಳು.

ಯುವಕ "ಹೀಗೆ ಯಾರು ಬೇಕಿದ್ದರೂ ಹೇಳಬಹುದು. ಖಚಿತವಾಗಿ ಹೇಳು. ಎಂದ. ಅಪರಂಜಿ ಹೇಳಿದಳು.

"ಮೊದಲ ಪ್ರಶ್ನೆ ಗೌರೀ ಹಬ್ಬ ಯಾಕೆ ಆಚರಿಸುತ್ತಾರೆ ಅಂತ. ಇದು ನಿನ್ನನ್ನು ಕಾಡುತ್ತಿರುವ ಪ್ರಶ್ನೆ. ಅದಕ್ಕೆ ಉತ್ತರ ಇದು: ಗೌರಿಯ ದಯೆಯಿಂದ ನಮ್ಮ ದೇಶದಲ್ಲಿ ಕುಟುಂಬ ಭದ್ರವಾಗಿಯೇ ಇದೆ. ಇನ್ನೂ ಹೆಚ್ಚು ಸುಭದ್ರವಾಗುತ್ತಲೇ ಇದೆ, ಹೀಗಿರಲು ಹೆಂಗಸರ ತ್ಯಾಗ ಅಗತ್ಯ. ಹೆಂಗಸರು ಭೋಗದ ಕಡೆಗೆ ಓಲಿದರೆ, ಕುಟುಂಬ ಪಾಶ್ಚಾತ್ಯ ಹಾಗೂ ಮುಂದುವರಿದ ರಾಷ್ಟ್ರಗಳಲ್ಲಿರುವಂತೆ, ಎಕ್‌ದಂ ಪಾತಾಳಕ್ಕೆ ಹೋಗುತ್ತದೆ. ಆಗ ಪುರುಷರು ಸ್ತ್ರೀಯರು ಅಂತ ಗಲಭೆಯಾಗಿ ದೇಶ, ಮನೆ, ಮನಸ್ಸುಗಳು ಒಡೆದು ಚೂರಾಗುತ್ತವೆ. ದುರಾಚಾರಿಗಳೇ ದೊಡ್ಡವರೆನಿಸಿಕೊಂಡು ನೀತಿ ಹೇಳುತ್ತಾರೆ. ಅಲ್ಲಿಂದ ಇಲ್ಲಿಗೂ ಗಾಳಿ ಬೀಸುತ್ತಿದೆ. ಅಲ್ಲಿ ಏನೆಲ್ಲಾ ಇದ್ದರೂ ಇನ್ನೂ ಸ್ತ್ರೀವಿಮೋಚನೆ ಏಕಿದೇ ? ಹೆಣ್ಣು ಏನೆಲ್ಲಾ ಕಳೆದುಕೊಂಡು ವಿಮೋಚನೆಯೊಂದನ್ನೇ ಪಡೆಯುತ್ತಾಳೆ.

ಇಲ್ಲಿನ ಸ್ತ್ರೀಯರು ಹಾಗಲ್ಲ. ಗೌರಿ ಹಬ್ಬ ಅಂತ ಒಂದು ತಿಂಗಳ ಮೊದಲೇ ಗೃಹ ಸೌಲಭ್ಯಗಳನ್ನು ಕಟ್ ಮಾಡುತ್ತಾರೆ. ಪುರುಷರ ಜೇಬಿಗೆ ಒತ್ತಡ ಹಾಕು

ರ್ತಾರೆ. ಅವರಿಗೆ ಪ್ರಕೃತಿ ಸಹಜವಾದ ಏನೊಂದನ್ನು ಅಂದರೆ ಊಟ, ನೀರು, ಕಾಫಿಗಳನ್ನು ಕೊಡುವುದಿಲ್ಲ, ಇದರೆ ವ್ರತವನ್ನು ಸ್ತ್ರೀಯರಿಗೆ ಹೇಳಿದವನೇ ಪುರುಷ; ವ್ರತ-ಗೌರೀ ಪೂಜೆ, ಮಾಡುವುದೇ ಪುರುಷನ ದೀರ್ಘಾಯುಸ್ಸು, ಐಶ್ವರ್ಯಾಭಿ ವೃದ್ಧಿಗಳಿಗಾಗಿ: ಆದುದರಿಂದ ಪುರುಷರ ಪ್ರತಿಭಟನೆ ಇಲ್ಲವೇ ಇಲ್ಲ.

ಇನ್ನು ಎರಡನೇ ಪ್ರಶ್ನೆ ನಮ್ಮವರು ಕ್ರಿಕೆಟ್ ಏಕೆ ಆಡುತ್ತಾರೆ ಅಂತ ಅಲ್ಲವೇ ? ಎಂದು ಕೇಳಿದಳು ಅಪರಂಜಿ.


ಪೀಪಿ ಹುಡುಗನ ಮುಖದಲ್ಲಿದ್ದ ಚಿಂತೆಯ ಗೆರೆಗಳು ಅರ್ಧಕ್ಕರ್ಧ ಮಾಯ ವಾಗಿದ್ದವು. "ಹೌದು. ಅದೇ ನನ್ನ ದೊಡ್ಡ ಪ್ರಶ್ನೆ" ಎಂದ "ಕ್ರಿಕೆಟ್ ಏಕೆ ಆಡುತ್ತಾರೆ ಎಂದರೆ ಮುಖಕ್ಕೆ ಹೊಡೆಸಿಕೊಳ್ಳುವುದಕ್ಕೆ, ಅಲ್ಲದೆ ಯಾವ ಕ್ರಿಕೆಟ್, ಯಾವುದು ಕ್ರಿಕೆಟ್ ಎಂಬುದೂ ಪ್ರಶ್ನೆ. ಒಂದು ದಿನದ್ದೋ, ಟೆಸ್ಟೋ, ಫಸ್ಟ್ ಕ್ಲಾಸಿನದೋ ಕ್ರಿಕೆಟ್ ಗೆಲ್ಲಬೇಕಾದರೆ ಆ ಟೀಮಿನಲ್ಲಿ ಹದಿಮೂರು ಜನ ಇರಬೇಕು. ಹನ್ನೊಂದು ಆಟಗಾರರು ಮತ್ತು ಇಬ್ಬರು ಅಂಪೈರುಗಳು. ಅಲ್ಲದೆ ಕಾಲ, ದೇಶ ಅನ್ನುವುದು ಮುಖ್ಯ.

ಕೊಲಂಬೋ, ಕ್ಯಾಂಡಿಗಳು, ಆಸ್ಟ್ರೇಲಿಯದಲ್ಲೂ ಇಲ್ಲ, ಷಾರ್ಜಾದಲ್ಲೂ ಇಲ್ಲ, ಸೆಲೆಕ್ಷನ್ ಕಮಿಟಿಗಳು ಇರುವುದು ನಿಜ, ಅವು ಹಲವು ಹದಿನೆಂಟು ಕಾರಣ ಗಳನ್ನೊಡ್ಡಿ ಒಂದು ಟೀಂ ಆರಿಸುತ್ತವೆ. ಅದು ಆರಿಸಿದ ಟೀಂ ಅಷ್ಟೇ, ಗೆಲ್ಲುವ ಟೀಂ ಅಲ್ಲ, ಬಾಲೆಸೆಯುವರೆಲ್ಲಾ ಬೌಲರುಗಳಲ್ಲ, ಹಲಗೆ ಹಿಡಿದವರು ಬ್ಯಾಟ್ಸ ಮನ್ನುಗಳೂ ಅಲ್ಲ, ಒಳ್ಳೇ ಆಟಗಾರರಿದ್ದಾಗ, ಅನುಕೂಲಗಳಿರುವುದಿಲ್ಲ, ಅನು ಕೂಲಗಳು ಇದ್ದರೆ ಒಳ್ಳೆ ಆಟಗಾರರಿರುತ್ತಾರೆ ಎಂದೇನೂ ಅಲ್ಲ. ಇದ್ದರೂ ಅವರನ್ನು ಕೇಳುವವರಿಲ್ಲ, ಹೀಗಾಗಿ ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ, ವೀರ ಗೀತೆ ಗಳ ಪಠಣಗಳು ಹೇಗೆ ನಿಷ್ಪ್ರಯೋಜಕವೋ ಹಾಗೆ, ಕ್ರಿಕೆಟ್ ಆಟದಲ್ಲಿ ಸೋತಾಗ ಏಕಾದರೂ ಆಡುತ್ತಾರೋ ಎನ್ನಿಸುವುದೂ ನಿಷ್ಪ್ರಹೋಜಕ. ಅಯ್ಯಾ ನನ್ನ ಮನಸ್ಸಿನ ಚಿಂತೆಯೇನು ಹೇಳುವೆಯೊ ?"

ಪೀಪಿ ಹುಡುಗನ ಸಣ್ಣಗೆ ಸಿಳ್ಳೆ ಹಾಕಿ ಹೇಳಿದ.

"ಅಪರಂಜಿ. ನಿನ್ನದು ಪ್ರೇಮ ಸಮಸ್ಯೆ. ನಿನ್ನ ಜೀವದ ಮೇಲಿನ ಪ್ರೇಮ, ಈ ವರ್ಷ ಮಲೆನಾಡಿನಲ್ಲೂ ಮಳೆ ಇಲ್ಲ, ಹುಲ್ಲುಗರಿಕೆಯೂ ಸೀದುಹೋಗಿದೆ, ಕುಡಿಯುವ ನೀರು ಕಾಡಲ್ಲೂ ಇಲ್ಲ. ಊರುಗಳಲ್ಲಿ ಸಭೆ, ಬಂದು, ಘೇರಾವ್,

ಕರ್ಫ್ಯೂ, ಆದುದರಿಂದ ತಜ್ಞರು ತಮ್ಮ ಸಂಬಳದ ಮೇಲಿನ ಪ್ರೀತಿಯಿಂದ ಹೇಗೆ ಸುಳ್ಳು ಹೇಳುತ್ತಾರೋ, ಹಾಗೆ ನೀನು ಜೀವದ ಮೇಲಿನ ಆಶೆಯಿಂದ ಬಾಯಿ ಬಾಯಿ ಬಿಡುತ್ತೀ. ಗೌರಿ ಹಬ್ಬದ ಪ್ರಸಾದ, ಗಣೇಶನ ಪ್ರಸಾದ ಸ್ವೀಕರಿಸು. ನೊಡೋಣ, ದೇವರಿದ್ದಾನೆ. ಇನ್ನೂ ನಾಲ್ಕು ಮಳೆಗಳಿವೆ, ಒಂದಲ್ಲ ಒಂದು ಮಳೆ ಬಂದೀತು ಬರಲಿ," ಅಪರಂಜಿ ನಕ್ಕಳು.




ಬ್ಯಾಂಕ್‌ನಿಂದ ಹಣಾ ತರ್ತೀನಿ ಅಂತೀರ, ಚೆಕ್ ಬುಕ್ಕೇ ಇಲ್ವಲ್ಲಾರೀ !

ಶುಭಾಶಯಗಳೊಂದಿಗೆ :—

ವೆರೈಟಿ ಫುಡ್ ಪ್ರಾಡಕ್ಟ್ಸ

ಉತ್ತಮ ದರ್ಜೆ ಬಿಸ್ಕತ್ತುಗಳ ತಯಾರಕರು



ಕಾರ್ಖಾನೆ   ನಂ. 55, ಬೊಮ್ಮಸಂದ್ರ ಇಂಡಸ್ಟ್ರಿಯಲ್
ಲೇಔಟ್, ಆನೇಕಲ್ ತಾಲ್ಲೂಕು
ಬೆಂಗಳೂರು ಜಿಲ್ಲೆ

ಶುಭಾಶಯಗಳೊಂದಿಗೆ ;—

ಸ್ಕೈಲಾರ್ಕ್ ಆ್ಯನ್ಸಲರೀಸ್ ಕಾರ್ಪೋರೇಷನ್

ಎ–118, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,

ಬೆಂಗಳೂರು–560 058.

ಶುಭಾಶಯಗಳೊಂದಿಗೆ

ಟರ್ನ್-ಕೀ ಕನ್‌ಸ್ಟ್ರಕ್ಷನ್ಸ್

(ಪ್ರೈ ಲಿಮಿಟೆಡ್)

11ನೇ ಮೇನ್ ರಸ್ತೆ

ಬೆಂಗಳೂರು – 560003

ಫೋನ್ : 364118

ಶುಭಾಶಯಗಳೊಂದಿಗೆ

ದೂರವಾಣಿ 353346/385814

ರೋನಿಶ ಅಂಡ್ ಕಂಪನಿ

315, ಗುರುಸಿದ್ಧ ಕೃಪ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560 086.

ವಿತರಕರು “ಜೆನಿಸಿಸ್” ಟೆಲಿಫೋನ್ ಉಪಕರಣಗಳು
“ಹೈಲೆಟ್” ಎಮರ್ಜೆನ್ಸಿ ಲೈಟುಗಳು
“ಇಂಪಾಲ” ಇಂಟರ್ ಕಾಂಗಳು

ಶುಭಾಶಯಗಳೊಂದಿಗೆ

ಜಯಂತಿ ಪವರ್ ಪ್ರೆಸ್

ಬೆ ಂ ಗ ಳೂ ರು.

ಶುಭಾಶಯಗಳೊಂದಿಗೆ

ಹ್ಯೂಮರ್ ಕ್ಲಬ್ ಇಂಟರ್‌ನ್ಯಾಷನಲ್

ಸೇರಿರಿ

ತಮ್ಮೆಲ್ಲ ಚಿಂತೆ, ಕ್ಲೇಶಗಳಿಗೆ ಉತ್ತಮ ಔಷಧ
ಹಾಸ್ಯ ಮನರಂಜನೆಯೊಂದಿಗೆ ಮನಃ ಕ್ಲೇಶಗಳನ್ನು ದೂರವಿರಿಸುತ್ತದೆ.

ಸಂಪರ್ಕ ವಿಳಾಸ ವೈ. ಎಂ. ಎನ್. ಮೂರ್ತಿ
ಸ್ಥಾಪಕ ಅಧ್ಯಕ್ಷ
28/1 ಸೌತ್‌ಎಂಡ್ ರಸ್ತೆ
ಬೆಂಗಳೂರು–560 004

ದೂರವಾಣಿ 602434

ಶುಭಾಶಯಗಳೊಂದಿಗೆ

ಬಿ. ಎಸ್ ವಿಜಯೇಂದ್ರ ಅಸೋಸಿಯೇಟ್ಸ್

281, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು–560 010

ಶುಭಾಶಯಗಳೊಂದಿಗೆ

ಟೆಕ್ನೋಲಿಂಕ್ ಎಂಟರ್‌ಪ್ರೈಸಸ್

ನಂ. 35, 5ನೇ ಕ್ರಾಸ್ 1ನೇ ಮೇನ್, ಎಸ್. ಕೆ. ಗಾರ್ಡನ್
ಬೆನ್‌ಸನ್ ಟೌನ್, ಬೆಂಗಳೂರು–560 046

ಶುಭಾಶಯಗಳೊಂದಿಗೆ

ಎಕ್ಸಲ್ ಟೂಲ್ಸ್ ಎಂಡ್ ಇಂಜಿನೀರಿಂಗ್ ಎಂಟರ್‌ಪ್ರೈಸಸ್

ಬಿ–20, 1ನೇ ಕ್ರಾಸ್, 1ನೇ ಸ್ಟೇಜ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560 058.




ಶುಭಾಶಯಗಳೊಂದಿಗೆ

ಮಹಾವೀರ್ ಪೇಪರ್ ಮಾರ್ಟ್

MAHAVEER PAPER MART

229/3, ಸುಲ್ತಾನ್‌ಪೇಟೆ, 560 053

229/3, SULTANPET, BANGALORE–560 053



ಪೇಪರ್, ಬೋರ್ಡ್ ಮತ್ತು ಸ್ಟೇಷನರಿ ವ್ಯಾಪಾರಿಗಳು

(Dealers in Paper, Board & Stationery)

ನಮ್ಮಲ್ಲಿ ಸದಾಕಾಲದಲ್ಲೂ ಗುಜರಾತಿ ಹಾಗೂ ಮಾರವಾಡಿ
ಲೆಕ್ಕ ಪುಸ್ತಕಗಳು ದೊರೆಯುತ್ತವೆ.

(Gujarathi & Marvadi Account Books are always available with us)

No. 23 AL 84-NT III

—:ಶುಭಾಶಯಗಳೊಂದಿಗೆ:—



ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರ್ನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ